ಕೊರವಂಜಿ

KORAVANJI
Kannada Monthly

ಸಂಪಾದಕರು:
ಶ್ರೀ|| ರಾ. ಶಿ.

ಬರಹಗಾರರು:

ಶ್ರೀ|| ಕುಮಾರ್
ಶ್ರೀ|| ಅ. ರಾ. ಸೆ.
ಶ್ರೀ|| ರಾಮು
ಶ್ರೀ|| ಶಾ. ವೆಂ. ಸೂರಿ
ಶ್ರೀ|| ಕೇಕ್ಷ
ಶ್ರೀ|| ಒ. ಟ್ಟೆ

ಇತ್ಯಾದಿ, ಇತ್ಯಾದಿ.



ಡಿಸೆಂಬರ್
೧೯೬೩

೨೫ ನ. ಪೈ.

ತಿಳಿನಗೆಯ ಮಾಸಪತ್ರಿಕೆ


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO BANGALORE MADRAS MADURAI BOMBAY
FAS



ಸಂಪುಟ ೨೨ ಡಿಸೆಂಬರ್ ೧೯೬೩ ಸಂಚಿಕೆ ೯

ಕಂಬನಿ

ಅಸ್ಪೃಶ್ಯತೆಯು ನಿವಾರಣೆಗಾಗಿ ಟೊಂಕ ಕಟ್ಟಿದ ಮಹಾತ್ಮಾಜೀಯು ವರು, ವರ್ಣಭೇಧ ನಿವಾರಣೆಗಾಗಿ ಟೊಂಕ ಕಟ್ಟಿದ ಅಧ್ಯಕ್ಷ ಕೆನಡಿಯುವರನ್ನು ಆದರದಿಂದ ಅಪ್ಪಿ ಸ್ವಾಗತಿಸುತ್ತಿದ್ದಾರೆ—ಈಗ.

ನವೆಂಬರ್ ತಿಂಗಳಲ್ಲಿ ಕೊರವಂಜಿಯು ಕಣ್ಣೀರು ಹರಿಸುವಂತಾಯಿತು. ಕೊರವಂಜಿಯು ಹುಟ್ಟಿದಂದಿನಿಂದ, ಅವಳನ್ನು ಆದರ ವಾತ್ಸಲ್ಯಗಳಿಂದ ಬರ ಮಾಡಿಕೊಂಡು ಲಲ್ಲೆಯಾಡುತ್ತಿದ್ದ, ಕನ್ನಡಿಗರಿಗೆ ಚಿರಪರಿಚಿತನಾದ, "ಆನಂದ"ನು ಹದಿನೇಳನೆಯ ತಾರೀಖು ರಾತ್ರಿ ಇಹಲೋಕದ ಬಂಧನಗಳನ್ನು ಕಳಚಿಕೊಂಡು ಕಣ್ಮರೆಯಾದ.

"ಆನಂದ"ನ ಮನೆಯವರಲ್ಲಿ ಕೊರವಂಜಿಯೂ ಒಬ್ಬ ಮಗಳು ಎನ್ನುವ ರೀತಿಯಲ್ಲಿ ಆ ಮನೆಯವರೆಲ್ಲರೂ ಆದರಿಸುತ್ತಿದ್ದರು. ಅಷ್ಟು ವಿಶ್ವಾಸದಿಂದ ನೆಂಟರಾಗಿರುವ ಆನಂದನ ಮನೆಯವರ ದುಃಖದಲ್ಲಿ ತಾನೂ ಸಮಭಾಗಿಯಾಗಿದ್ದೇನೆ ಎಂದು ಕೊರವಂಜಿಯು ಬಿಕ್ಕಿಬಿಕ್ಕುತ್ತಾಳೆ.

★ ಕುಹಕಿಡಿಗಳು ★

ಸಣ್ಣ ಉಳಿತಾಯ ಯಶಸ್ವಿಯಾಗುತ್ತದೆಯೇ?
ದೊಡ್ಡ ಉಳಿ ತಾಕಿದಮೇಲೆ ಸಣ್ಣ ಉಳಿಗೆ ಉಳಿಯೋರು ಯಾರು?

* * * *

ಸಾಲ ಪಡೆಯುವ ವಿಧಾನವನ್ನು ಶಾಲಾ ಮಾಸ್ತರಿಗೆ, ಪಠಾಣರು ವಿವರಿಸುತ್ತಿದ್ದರು. ಸುದ್ದಿ.

—ಅಜ್ಜೀಗೆ....ಏನೋ ಹೇಳಿಕೊಟ್ಟಹಾಗೆ!

* * * *

ಶರಾವತಿ ತನಿಖೆಗೆ ನಮ್ಮನ್ನು ನೇಮಿಸಬಹುದು ಎಂದು ಹೈ ಕೋರ್ಟಿನ ಮಾಜಿ ನ್ಯಾಯಾಧೀಶರುಗಳು ಕಾದಿದ್ದಾರೆ ಎನ್ನುವುದು ಶುದ್ಧ ಸುಳ್ಳು.

* * * *

ಮೊನ್ನೆ ಲಾರಿ, ರೈಲು ಡಿಕ್ಕಿ ಹೊಡೆದಾಗ, ಲಾರಿ ಡ್ರೈವರನು "ಯಾಕೋ! ಮಗನೆ ಸೈಡ್ ತೋರಿಸಲಿಲ್ಲ" ಅಂತ ಇಂಜಿನ್ ಡ್ರೈವರನ್ನು ಕೇಳಿದ ಎನ್ನುವುದು ಶುದ್ಧ ಕುಹಕ.

* * * *

ಚೌ ಎನ್ ಲೈ ಅವರು ವಾಂತಿ ಮಾಡಿಕೊಳ್ಳುತ್ತಿದ್ದಾರಂತೆ
— ವಾಂತಿಯಲ್ಲ, ಸ್ವಾಮಿ. ಬಯಕೆ! ಕಂಡೋರ ಭೂಮಿ ಕಂಡು ಬಯಕೆ!!

* * * *

ಹಾರ್ಮೋನಿಯಂಗೆ ಉಪಯೋಗಿಸುವ ಮರವನ್ನು ನೀರಿನಲ್ಲಿ ಇಪ್ಪತ್ತು ವರ್ಷ ನೆನೆಸಿಡುತ್ತಾರೆ ಎಂದು ಒಬ್ಬರ ಅಂಬೋಣ.

— ಅಷ್ಟು ಸಾಲದು, ರಾಯರಾ! ಒಂದು ಗಂಟೆ ಚಿತೆಯಲ್ಲಿಟ್ಟು ಸುಡಬೇಕು!!

* * * *

ತಮಿಳುನಾಡಿನಲ್ಲಿ ಒಬ್ಬಾತ ದೇವಸ್ಥಾನದ ಗೋಪುರಗಳಿಗೆ ಕಲ್ಲು ಎಸೆಯುತ್ತಿದ್ದಾನಂತೆ.

—ಅವನ ಗೋಪುರ ಖರಾಬಾಗಿರಬೇಕು!

* * * *

ಬಾಳೆಹಣ್ಣಿನ ರಫ್ತನ್ನು ರಷ್ಯಾಕ್ಕೆ ನಾವು ಮಾಡಿದಮೇಲೆ
—ಅಲ್ಲಿ ಜಾರಿ ಬಿದ್ದು ಮಂಡಿ ಮುರಿಕೊಂಡವರ ಸಂಖ್ಯೆ ಏರಿದೆಯಂತೆ!!

* * * *

ಯಾಕಪ್ಪಾ! ಅಷ್ಟು ಗಂಟಲು ಕೆರೀತಾ ಇದೆ ನಿನಗೆ, ಈ ಶುಂಠಿ ಚೂರು ಬಾಯಲ್ಲಿಟ್ಟುಕೋ ಅಂತ ರಂಗಜ್ಜಿ, ಗಾಡಿ ಹೊಡೆಯುತ್ತಿದ್ದವನಿಗೆ ಕೊಟ್ಟಳಂತೆ.

—ಪಾಪ! ಆವಳಿಗೆ ಗೊತ್ತಿತ್ತಿಲ್ಲ. ಅವನು ಉರ್ದು ಮಾತನಾಡುತ್ತಿದ್ದ ಅಂತ.

SOCIAL STUDIES-1

ಸ್ನಾತಕೋತ್ತರ (Post - Graduate) ವಿದ್ಯಾರ್ಥಿಗಳಿಗೆ ಮಾತ್ರ

ಕಾಲ: 105 ಮಿನಿಟ್ಸ್. ಅಂಕಗಳು : 105

ಸೂಚನೆ: ಸ್ಪಷ್ಟವಾದ ಉತ್ತರವು ತಿಳಿದಿದ್ದರೆ ಮಾತ್ರ ಉತ್ತರ ಬರೆಯಿರಿ.

ಪ್ರಶ್ನೆ 1 ಬ್ರಾಕೆಟ್‌ನಲ್ಲಿರುವ ಸರಿಯಾದ ಪದವೊಂದನ್ನು ಸೇರಿಸಿ, ಈ ಕೆಳಗೆ ಕೊಟಿರುವ ವಾಕ್ಯಗಳನ್ನು ಪೂರ್ತಿ ಮಾಡಿ ಬರೆಯಿರಿ.

1. ಇವರು ಸಂಬಳವಿಲ್ಲದೆ ಸೇವೆ ಸಲ್ಲಿಸಲು ಸದಾ ಸಿದ್ಧ (ಮಂತ್ರಿಗಳು, ಬಸ್ ಕಂಡಕ್ಟರುಗಳು ಹೋಟೆಲ್ ಮಾಣಿಗಳು, ತೋಳಗಳು)
2. ನಮ್ಮ ದೇಶದಲ್ಲಿ ಇವರೇ ಜಾಸ್ತಿ (ಪುಡಾರಿಗಳು, ಭಿಕ್ಷುಕರು, ರೋಗಿಗಳು, ಇತ್ತೀಚೆಗೆ ಹಿಂದೀ ಕಲಿತವರು)
3. ಇದರ ಮಾರಾಟ ಇತ್ತೀಚೆಗೆ ಅಧಿಕವಾಗಿದೆ. (ಸ್ನೋ, ಅನಾಸಿನ್, ಕಳ್ಳಬಟ್ಟಿ, ನಗ್ನ ಕಾದಂಬರಿ)
4. ಬೆಂಗಳೂರಿನಲ್ಲಿ ಕಿಕ್ಕಿರಿದ ಜನ ಸಂದಣಿಗೆ ಇದು ಪ್ರದರ್ಶನವಾಗುತ್ತೆ. (ಕನ್ನಡ ಚಿತ್ರ, ತಮಿಳುಚಿತ್ರ, ಹಿಂದೀ ಚಿತ್ರ, ದೊಂಬರಾಟ)
5. ಇವನು ಯುದ್ಧದಲ್ಲಿ ಎಂದೂ ಸೋತಿಲ್ಲ. (ಶಿವಾಜಿ ಗಣೇಶನ್, ಎಂ. ಜಿ. ರಾಮಚಂದ್ರ, ಶಿವಾಜಿ, ಪುಲಿಕೇಶಿ)
6. ಬಿ. ಟಿ. ಎಸ್. ಗಿಂತ ಇದೇ ಮೇಲು (ಕಾಲು ನಡಗೆ, ಚಟ್ಟ, ಎತ್ತಿನ ಗಾಡಿ)
7. ವಿದ್ಯಾರ್ಥಿಗಳು ಆಗಾಗ್ಗೆ ಇದಕ್ಕೆ ಹೋಗುತ್ತಾರೆ. (ಕಾಲೇಜಿಗೆ, ಲೈಬ್ರರಿಗೆ, ನ್ಯಾಯಾಲಯಕ್ಕೆ-ಚಲನ ಚಿತ್ರಕ್ಕೆ)
8. ಮಾಜಿ ಮಂತ್ರಿಗಳಿಗೆ ಇದು ಮೀಸಲು. (ಜಟ್ಕಾ-ಕಾರ್ಪೊರೇಷನ್ ಅಧ್ಯಕ್ಷತೆ-ಮುಸುಕು)

ಫಿರ್ದೂಸಿ ಕತೆ

ಸುಮಾರು ಸಾವಿರ ವರ್ಷಗಳ ಹಿಂದೆ ಅಬು ಖಾಸಿಂ ಮನ್ಸೂರ್ ಎಂಬುವನೊಬ್ಬ ಪರ್ಷಿಯಾ ದೇಶದಲ್ಲಿದ್ದ. ಸ್ವಲ್ಪ ಕೆಕರಾ ಅವನು. ಅವನ ಆಸೆ ಏನು ಗೊತ್ತೆ? ತನ್ನ ದೇಶದ ಚರಿತ್ರೆಯನ್ನು ಪದ್ಯದಲ್ಲಿ ಬರೆಯಬೇಕು, ಅಂತ.

ಆ ದೇಶದಲ್ಲಿ ಒಬ್ಬ ಸುಲ್ತಾನ ಇದ್ದ. ಯಥಾಪ್ರಕಾರ ಅವನ ಹೆಸರು ಸುಲ್ತಾನ್ ಮಹಮ್ಮದ್ ಅಂತ. ಘಸ್ನಿ ಅವನ ರಾಜಧಾನಿ. ಅಬು ಖಾಸಿಂ ಮನ್ಸೂರನ ಹಿರಿಯಾಸೆ ಹೀಗೆ ಅಂತ ಸುಲ್ತಾನನಿಗೆ ಗೊತ್ತಾಯಿತು ಅವನನ್ನು ಕರಕೊಂಡು ಬನ್ರೋ ಅಂತ ಸೇವಕರಿಗೆ ಅಪ್ಪಣೆಮಾಡಿದ. ಮನ್ಸೂರನನ್ನು ಹಿಡಿದುಕೊಂಡು ಬಂದರು ಸುಲ್ತಾನ ಅವನನ್ನು ನೋಡಿದ. "ತಿಳಿವಳಿಕಸ್ಥನಾಗಿ ಕಾಣ್ತಾ ಇದಿ. ಜಾಣ ಇರಬೇಕು ನೀನು. ಆದರೆ ನಿನ್ನ ಹೆಸರು ಚೆನ್ನಾಗಿಲ್ಲ. ಫಿರ್ದೂಸಿ ಅಂತ ನಿನಗೆ ಹೊಸ ನಾಮಕರಣ ಮಾಡ್ತೀನಿ. ಸ್ವರ್ಗಲೋಕದಿಂದ ಇಳಿದು ಬಂದವನು ಅಂತ ಅದರ ಅರ್ಥವಂತೆ" ಅಂತ ಹೇಳಿದ.

ಆ ದೇಶದ ಪರಮೋನ್ನತ ಕವಿ ಆದ, ಫಿರ್ದೂಸಿ.

ಆದರೆ, ಪದ್ಯದಲ್ಲಿ ದೇಶದ ಚರಿತ್ರೆ ಬರೆಯುವ ಆಸೆ ಫಿರ್ದೂಸಿಗೆ ಯಾಕೆ ಬಂತು ಗೊತ್ತೆ? ಅವನು ಹುಟ್ಟಿದ ಊರಿನಲ್ಲಿ ಆರು ತಿಂಗಳು ಬೆಳೆ ಆಗ್ತಿರಲಿಲ್ಲ, ಅಷ್ಟು ಜೋರಾಗಿ ಮಳೆ. ಇನ್ನಾರು ತಿಂಗಳು ಬೆಳೆ ಆಗ್ತಿರಲಿಲ್ಲ, ಸ್ವಲ್ಪವೂ ನೀರಿಲ್ಲದೆ. ಗುಡ್ಡದ ತಪ್ಪಲಿನಲ್ಲಿದ್ದ ಅವನಿಗೆ ಅನ್ನಿಸಿತು, ಈ ಕಣಿವೇಲಿ ಒಂದು ಅಣೆಕಟ್ಟು ಕಟ್ಟಿದರೆ ಮಳೆ ನೀರೆಲ್ಲಾ ಇಲ್ಲೇ ಶೇಖರವಾಗುತ್ತೆ. ನಮ್ಮ ಹಳ್ಳೀಲಿ ಕ್ಷಾಮದ ಹೆಸರೇ ಆಮೇಲೆ ಇರುಲ್ಲ ಅಂತ. ಅಣೆಕಟ್ಟು ಕಟ್ಟಿಸಬೇಕಾದರೆ, ಗ್ರಾಮ ಪಂಚಾಯ್ತಿಗೆ ಬರೀಬೇಕು ಅವರು ತಾಲ್ಲೂಕು ಸಮಿತಿಗೆ ಶಿಫಾರಸು ಮಾಡಬೇಕು. ಅವರು ಡಿಸ್ಟ್ರಿಕ್ಟ್ ಬೋರ್ಡಿಗೆ ಬರೀಬೇಕು, ಅವರು ಸರ್ಕಾರಕ್ಕೆ ಬರೀಬೇಕು. ಸರಕಾರ ಯೋಜನಾ ಮಂಡಲೀನ ಕೇಳಬೇಕು. ಅವರು ಅವಕಾಶವಾದಾಗ ಬಂದು ತನಿಖೆ ಮಾಡಬೇಕು. ಆ ಮೇಲೆ ಅವರು ಏನು ತೀರ್ಮಾನ ಕೊಡ್ತಾರೋ? ಅದನ್ನು ನೋಡಿ ಸುಲ್ತಾನ ಸರ್ಕಾರಕ್ಕೆ ಆಜ್ಞೆ ನೀಡಬೇಕು. ಇಷ್ಟೆಲ್ಲಾ ಆಗುವ ಹೊತ್ತಿಗೆ ಹಳ್ಳಿ ನಿರ್ನಾಮವಾಗಿಬಿಡುತ್ತೆ ಅಂತ ಫಿರ್ದೂಸಿಗೆ ಕವಿ ಸಹಜ ದೃಷ್ಟಿಯಿಂದ ತಿಳಿಯಿತು. ಅದಕ್ಕೇ ಅವನಿಗೆ ಪದ್ಯ ಬರೆಯೋ ಆಸೆ ಹುಟ್ಟಿಕೊಂಡಿತು.

ಯಾಕೆ ಅಂತೀರಿ? ಆ ಕಾಲದಲ್ಲಿ ಪದ್ಯ ಬರೆಯೋರು ವಿರಳ. ಅದಕ್ಕೇ ಪಂಕ್ತಿಗೊಂದು ಚಿನ್ನದ ಸವರನ್ ಕೊಡ್ತಾ ಇದ್ದ ಸುಲ್ತಾನ. ದೇಶದ ಚರಿತ್ರೆ ಅಂತ ಬರೆದರೆ ಅದು ಮಹಾಕಾವ್ಯ ಆಗಲೇ ಬೇಕು ಅಂದ ಮೇಲೆ ಒಂದು ಅರವತ್ತು ಸಾವಿರ ಪಂಕ್ತಿಗಳನ್ನು ಬರೆದರೆ, ಅಣೆಕಟ್ಟು ಕಟ್ಟಬಹುದು ಅನ್ನಿಸ್ತು. ಅದಕ್ಕೇ ಅವನಿಗೆ ಆಸೆ ಹುಟ್ಟಿತು.

ಸುಲ್ತಾನನ ದರ್ಬಾರಿನಲ್ಲಿ ರಾಷ್ಟ್ರ ಕವಿಯಾಗಿ ಕೂತು ಬರೆಯುಕ್ಕೆ ಶುರು ಮಾಡಿದ ಫಿರ್ದೂಸಿ.

ಹಣಕಾಸಿನ ದರೋಗನಿಗೆ ಹುಕುಂ ಹೋಗಿತ್ತು. ಫಿರ್ದೂಸಿ ಪದ್ಯಗಳನ್ನು ಬರೆದು ಮುಗಿಸಿ, ತಲಪಿಸಿದಾಗ ಲೆಕ್ಕಹಾಕಿ ಹಣ ಕೊಡಬೇಕು ಅಂತ. ಅದಕ್ಕೇ ಅವನೊಂದು ಕಾಗದ ಬರೆಸಿದ "ಅಯ್ಯಾ! ಫಿರ್ದೂಸಿ, ಸುಲ್ತಾನರ ಹುಕುಂ ಹೀಗೆ. ಅದಕ್ಕೋಸ್ಕರ ದಿನದ ಸಂಜೆ ಹೊತ್ತಿಗೆ ಎಷ್ಟು ಪಂಙ್ತಿ ಬರೆದಿರ್ತೀಯೋ ಅದನ್ನು ಕಳಿಸಿಕೊಡು, ಹಣ ಪಾವತಿ ಮಾಡ್ತೀನಿ" ಅಂತ.

ಫಿರ್ದೂಸಿ, ಕವಿ ಸಹಜವಾದ ಬೆಪ್ಪುತನದಿಂದ ಹೇಳಿದ, "ದರೋಗರೇ, ಅಣೆ ಕಟ್ಟು ಕಟ್ಟುಕ್ಕೆ ಅಂತ ಹಣ ಶೇಖರಿಸಬೇಕು, ಪುಸ್ತುಕ ಮುಗಿಸಿದ ಮೇಲೆ ಕಳಿಸ್ತೀನಿ ಒಟ್ಟಿಗೇ ಹಣ ಕೊಡಿ. ಆಗ ನನಗೆ ಅನುಕೂಲ ಆಗುತ್ತೆ" ಅಂತ.

ದರೋಗನಿಗೆ ಖುಷಿಯಾಯ್ತು. ಕೈಗೆ ಕಾಸು ಕೊಡ್ತೀನಿ ಅಂದರೆ, ಬೇಡ ಎಲ್ಲಾ ಬಂದಾಕೊಡು ಮುಂದಕ್ಕೆ ಅನ್ನೋ ಮಂಕರೂ ಇದಾರಲ್ಲ! ಒಂದು ವರ್ಷ ಆಗಿ ಹೋಯಿತು ಅಂದರೆ ಬಡ್ಜೆಟ್ ಲಾಪ್ಸ್ ಆಗುತ್ತೆ ಅಂತಲೂ ಗೊತ್ತಿಲ್ಲ, ಪೆಚ್ಚು ಮುರವನಿಗೆ. ಮಾಡದೆ ಇರೋ ಕೆಲಸಾನ ಮುಗಿಸಿದ್ದೀವಿ ಅಂತ ಸುಳ್ಳು ಬರೆದು ಕಳಿಸಿ ಕಾಸು ಇಸ್ಕೊಳ್ಳೋ ಕಾಲದಲ್ಲಿ, ಇವ ಹೀಗಂತಾನಲ್ಲ! ಇವ ಯಾತಕ್ಕೆ ತಾನೆ ಲಾಯುಕ್ಕು? ಅದಕ್ಕೇ ಕವಿಯಾದ ಅಂತ ಕಾಣುತ್ತೆ" ಅಂದುಕೊಂಡ.

ಫಿರ್ದೂಸಿ ಬರೆದ, ಬರೆದ, ಬರೆದ ಅರವತ್ತು ಸಾವಿರ ಪದ್ಯಗಳನ್ನೂ ಬರೆದ. ಮುಗಿಯೋ ಹೊತ್ತಿಗೆ ಅವನಿಗೆ ಎಪ್ಪತ್ತರ ಪ್ರಾಯ. ಅರ್ಧ ಆಗಿಬಿಟ್ಟಿದ್ದ. ಏಕೆ ಅಂದರೆ ದರೋಗನಿಗೆ ತಿಳಿದಿತ್ತು; ಈ ಬಕ್ರ ಏನು ಮಾಡಿದರೂ ತೆಪ್ಪಗಿರ್ತಾನೆ ಅಂತ, ಅದಕ್ಕೆ ಅವನಿಗೆ ಮೋತಿಖಾನೆಯಿಂದ ಸರಬರಾಜು ಮಾಡಬೇಕಾದ ಆಹಾರ ಪದಾರ್ಥಗಳಲ್ಲಿ ಖೋತಾ ಮಾಡಿದ್ದ. ಕೃಶವಾಗಿದ್ದ ಫಿರ್ದೂಸಿ ಹೊರಲಾರದೆ ಹೊತ್ತುಕೊಂಡು ಪದ್ಯದ ಪುಸ್ತಕಾನ ಸುಲ್ತಾನನಿಗೆ ಒಪ್ಪಿಸಿದ. ಅರವತ್ತು ಸಾವಿರ ಚಿನ್ನದ ಮೊಹರುಗಳನ್ನು ಕೊಡಿಸಬೇಕು ಎಂದ.

ಸುಲ್ತಾನನಿಗೆ ಖುಷಿಯಾಯ್ತು, ನನ್ನ ಹೆಸರು ಈ ಪುಸ್ತಕದಲ್ಲಿ ಇದೆಯಲ್ಲಾ ಅಂತ. ಸುಲ್ತಾನ್ ಮಹಮುದ್ ಅಂತ ಬಂದ ಕಡೆಯೆಲ್ಲಾ ತನಗೇ ಅನ್ವಯಿಸುವ ವಿಷಯ ಅಂತ ತಿಳಿದುಕೊಂಡುಬಿಟ್ಟಿದ್ದ. ತಲೆತಲಾಂತರದಿಂದ ಅಲ್ಲಿದ್ದ ಸುಲ್ತಾನರ ಹೆಸರೆಲ್ಲಾ ಮಹಮ್ಮದ್ದೇ! ಇನ್ನೇನು ಹಣ ಕೊಡಿ ಅಂತ ಅಪ್ಪಣೆ ಮಾಡಬೇಕು, ಅಷ್ಟರಲ್ಲಿ ದರೋಗ ಓಡಿಬಂದ. "ಸುಲ್ತಾನ್ ಖಾವಂದ್, ಈಗಿನ ಚಿನ್ನ ನಿಯಂತ್ರಣ ದಿಂದಾಗಿ ಚಿನ್ನದ ಮೊಹರುಗಳನ್ನು ಕೊಡುವ ಹಾಗಿಲ್ಲ. ದೇಶದಲ್ಲೆಲ್ಲಾ ಮಿತವ್ಯಯ ಮಾಡಿ ಅಂತ ಫರ್ಮಾನ್ ಹೊರಡಿಸಿದೆ. ಆದ್ದರಿಂದ ಚಿನ್ನದ ಮೊಹರಿನ ಬದಲು ಬೆಳ್ಳಿಯ ಮೊಹರನ್ನು ಕೊಡೋಣ" ಅಂತ ಸಲಹೆ ಮಾಡಿದ.

ಸುಲ್ತಾನನಿಗೆ ಗೊತ್ತು. ದರೋಗನ ಮುಂದೆ ತನ್ನ ಆಟ ಏನೂ ನಡೆಯುಲ್ಲ ಅಂತ. ದರೋಗನ ತಂಗೀನೇ ಸುಲ್ತಾನನ ಕಿರಿಯ ಹೆಂಡತಿ ಅದಕ್ಕೇ ಸುಲ್ತಾನ ದರೋಗ ಹೇಳಿದ್ದಕ್ಕೆ ಒಪ್ಪಿಕೊಂಡ.

ದರೋಗ ಫಿರ್ದೂಸಿ ಮನೆಗೆ ಅರವತ್ತು ಸಾವಿರ ಬೆಳ್ಳಿ ಮೊಹರುಗಳನ್ನು ಕೂಲಿಗಳ ಕೈಲಿ ಕಳಿಸಿದ. ದುಡಿದು ಸುಸ್ತಾಗಿದ್ದ ಫಿರ್ದೂಸಿ ಆಗತಾನೆ ಎಣ್ಣೆ ಒತ್ತಿ ನೀರು ಹಾಕಿಕೊಂಡು, ಗಡ್ಡಕ್ಕೆ ಸಾಂಬ್ರಾಣಿ ಹೊಗೆ ಹಾಕ್ತಾ ಇದ್ದ. ಕೂಲಿಗಳು ಹಣದ ಮೂಟೆಗಳನ್ನು ತಂದಾಗ ಬಲು ಖುಷಿಯಾಯ್ತು. ಒಂದು ಮೂಟೇಗೆ ಸಕ್ಕರಗುತ್ತಿ ಹಾಕಿ ಹಿಡಿ ನಾಣ್ಯ ತೆಗೆದು ನೋಡಿದ; ಬೆಳ್ಳೀದು. ಅಷ್ಟರಲ್ಲೇ ಎಣ್ಣೆ ಒತ್ತಿ ನೀರು ಹಾಕಿದ ಪೈಲ್ವಾನ್ ಬಂದ. ನಾಣ್ಯನ ನೋಡಿದ. ಅರೆ ಇದು ಜರ್ಮನ್ ಬೆಳ್ಳಿ. ಒಂದು ಮೊಹರಿಗೆ ಇಂಥಾದ್ದು ಹತ್ತು ಸಾವಿರ ಕೊಡ್ತಾರೆ. ಕೊಸರಿಗೆ ಅಂತ ಒಂದು ಐದು ಸಾವಿರ ಬಿಸಾಕ್ತಾರೆ. ಇದರ ಬದಲು ಗುಲಗಂಜಿ ಕಳಿಸಿದ್ರೆ ಹೆಚ್ಚು ದುಡ್ಡು ಸಿಗ್ತಿತ್ತು ಅಂತ ನಿಜವಾದ ವಿಷಯ ಬಹಿರಂಗ ಪಡಿಸಿದ.

ಫಿರ್ದೂಸಿಗೆ ಆಸೆ ಭಂಗವಾಯಿತು ಮೂವತ್ತು ಸಾವಿರ ಬೆಳ್ಳಿ ನಾಣ್ಯನ ಕೂಲಿಗಳಿಗೆ ಅಂತ ಬಹುಮಾನ ಕೊಟ್ಟ. ಇನ್ನು ಮೂವತ್ತು ಸಾವಿರ ಕೊಟ್ಟು ಒಂದು ಬಟ್ಟಲು ಸುಮಾರಾದ ಷರಬತ್ತು ತರಿಸಿ ಕುಡಿದ

ಆ ಮೇಲೆ ನೋಡಿ, ಫಿರ್ದೂಸಿ ದೇಶದಲ್ಲೆಲ್ಲಾ ಸುತ್ತಾಡಿದ. ಹೋದಲ್ಲೆಲ್ಲಾ ಹಾಡಿದ. ಸುಲ್ತಾನ್ ಮಹಮ್ಮದನನ್ನು ಹೀಯಾಳಿಸಿ, ಅಣಕವಾಡಿ, ವಿಡಂಬನೆ ಮಾಡಿ ಗೇಲಿ ಎಬ್ಬಿಸಿದ ಕೇರಿಕೇರಿಯ ಜಟ್ಕಾದವರೆಲ್ಲಾ ಈ ಅಣಕುವಾಡುಗಳನ್ನೇ ಹಾಡುಕ್ಕೆ ಶುರುಮಾಡಿದರು.

ಎಂಟು ಹತ್ತು ವರ್ಷ ಆಗೋ ಹೊತ್ತಿಗೆ ಸುಲ್ತಾನ್ ಮಹಮ್ಮದನ ಕಿವಿಗೆ ಈ ಅಣಕವಾಡನ್ನ ಚಿಕ್ಕ ಹೆಂಡತಿ, ಹೊಸದಾಗಿ ಮದುವೆಯಾದೋಳು ಹಾಡಿದಳು. ಸುಲ್ತಾನನಿಗೆ ಆಗ ಅರಿವಾಯ್ತು. ತಾನು ಮಾಡಿದ್ದು ತಪ್ಪು ಅಂತ. ಈ ತಪ್ಪಿಗೆ ಯಾರು ಹೊಣೆ ದರೋಗ! ದರೋಗನನ್ನ ಆನೆಕಾಲು ಕೆಳಗೆ ಹಾಕಿ ತುಳಿಸಿ ಎಂದ. ಆರ್ಥಿಕ ಮಂತ್ರೀನ ಆನೆ ಕಾಲು ಕೆಳಗೆ ಹಾಕಿ ತುಳಿಸಿದರು. ಆ ಮೇಲೆ ಅರವತ್ತು ಸಾವಿರ ಚಿನ್ನದ ಮೊಹರುಗಳನ್ನು ತತ್‌ಕ್ಷಣ ಫಿರ್ದೂಸಿಗೆ ಕಳಿಸಿ ಅಂತ ಹುಕ್ಕುಂ ಹೊರಡಿಸಿದ.

ಹಣ ಹೋಗಿ ಫಿರ್ದೂಸಿ ಮನೆ ಸೇರೋ ಹೊತ್ತಿಗೆ, ಫಿರ್ದೂಸಿಯ ಹೆಣವನ್ನು ಚಟ್ಟದ ಮೇಲಿಟ್ಟು ಆ ಬಾಗಿಲಿಂದ ಹೊರಕ್ಕೆ ಸಾಗಿಸ್ತಾ ಇದ್ದರು.

ಯಾಕೆ ಹೇಳುಕ್ಕೆ ಬಂದೆ ಅಂದರೆ, ಆಳೋ ಸುಲ್ತಾನನ ಕಿವಿ ಕಚ್ಚಬೇಕಾದರೆ ಅಣಕವಾಡೇ ಆಯುಧ, ಗೇಲೀನೇ ಗಾಂಢೀವ. ಲಾಗಾಯ್ತಿನಿಂದಲೂ ಇದೇ ಮಾಮೂಲು.

—ಕುಮಾರ್.

ವೀರಣ್ಣನ ಮ್ಯಾಕ್‌ಬೆತ್

They also serve who !....

There are more things Horatio, than !....

ಕಳೆದ ಏಪ್ರಿಲ್ ತಿಂಗಳಿನಲ್ಲಿ, ವಸಂತ ಋತುವಿನ ಪ್ರಭಾವದಿಂದಲೋ ಏನೋ ಈರಣ್ಣ ಕೊನೆಗೊಮ್ಮೆ ತೀರ್ಮಾನಿಸಿದ.

" ಹಿಂದೆನಿತೋ ಬಾರಿ ನಾ ಪಾಪಿಯೆಂದಳಲಿದೆನು
ಅಂದೆನ್ನ ಮನವೆನ್ನ ಹಿಡಿತದೊಳಗಿತ್ತೇ ?
ಇಂದು ಬಂದ ವಸಂತ, ಚೆಂದದ ಗುಲಾಬಿ....

ಇವುಗಳ ಸಾಕ್ಷಿಯಾಗಿ ನಾನು ಬಿ.ಎಸ್ಸಿ, ಪಾಸು ಮಾಡಿಯೇ ಬಿಡುತ್ತೇನೆ."

ಊರಿನ ಬಸ್ ಕಂಡಕ್ಟರುಗಳು, ಪೆಟ್ರೋಲ್ ಬಂಕ್ ಗುಮಾಸ್ತರು, ಹತ್ತಿ ದಲ್ಲಾಲರು, ಕಾಲೇಜ್ ಹುಡುಗ ಹುಡುಗಿಯರು, ಮೇಷ್ಟರು ಮತ್ತು ಉಳಿದವರು ವಿಸ್ಮಯಚಕಿತರಾಗಿ ಒಬ್ಬರನ್ನೊಬ್ಬರು ನಿಟ್ಟಿಸಿನೋಡಿ ಹೇಳಿಕೊಂಡರು.

" ವೀರಣ್ಣ ಅಂತೂ ಪರೀಕ್ಷೆ ಕಟ್ಟುತ್ತಾನೆ ! "

ನಾನು ಮಾತ್ರ ನಂಬಲಿಲ್ಲ. ಆದರೆ ಈರಣ್ಣ ನನ್ನಿಂದಲೇ ಅಪ್ಲಿಕೇಷನ್ ಭರ್ತಿ ಮಾಡಿಸಿ, ತನ್ನ ಸ್ಕೂಟರಿನ ಮೇಲೆ ಕೂಡಿಸಿಕೊಂಡು ಕಾಲೇಜಿಗೆ ಕರೆದುಕೊಂಡು ಹೋಗಿ ಹಣ ಕಟ್ಟಿ, ಅಪ್ಲಿಕೇಷನ್ ಕೊಟ್ಟು ಕೈ ಮುಗಿದು ಬಂದಾಗ ನಂಬಲೇ ಬೇಕಾಯಿತು.

ಎಲ್ಲರದೂ ಒಂದು ಕತೆಯಾದರೆ ಇವನದೇ ಒಂದು. ಇವನು ಫೈನಲ್ ಬಿ. ಎಸ್ಸಿ. ಮುಗಿಸಿದರೂ ಸೆಕೆಂಡ್ ಬಿ. ಎಸ್ಸಿಯ ಇಂಗ್ಲೀಷ್ ಪಾರ್ಟ ಹಾಗೆಯೇ ಇಟ್ಟುಕೊಂಡಿದ್ದಾನೆ.

ಯಾವಾಗಲೂ ಸ್ಕೂಟರಿನ ಮೇಲೆ ತಿರುಗಾಡುವ ಇವನು ಕಾಲೇಜಿಗೆ ಹೋದುದು ಯಾವಾಗ? " ಕೃಷ್ಣಾರ್ಜುನ ಯುದ್ಧ " ಬಂದಾಗ ಥಿಯೇಟರಿನ ಮುಂದೆ ಕನ್ನಡ ಚಳುವಳಿ ಮಾಡುತ್ತಾ ಕುಳಿತ ಇವನು ಟ್ರೇಡ್ ಯೂನಿಯನ್ ಲೀಡರ್ ಕಂಡ ಹಾಗೆ ಕಾಣುತ್ತಿದ್ದ. ಎರಡು ವರ್ಷಗಳ ಕೆಳಗೆ ಇವನು ಬ್ರಿಗೇಡ್ ರೋಡಿನ

ಫುಟ್ ಪಾತಿನಮೇಲೆ ಕಾರ್ ರಿಪೇರಿ ಮಾಡುತ್ತಿದ್ದ. ಹೋದ ವರ್ಷ ಲೆವೆಲ್ ಕ್ರಾಸಿಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆಸಿದವನು ಇವನೇ! ಅವನ ಮಾತು ನಂಬುವುದು ಹೇಗೆ? ಈಗ ಒಂದು ವರ್ಷದ ಕೆಳಗೆ ಸಂಜೆ ನಾಲ್ಕು ಗಂಟೆಗೆ ಸ್ಕೂಲಿಗೆ ಬಂದ ಸತ್ಯವಂತ "ಅರ್ಜಂಟ್" ಎಂದು ನನ್ನನ್ನು ಕರೆದುಕೊಂಡು ಹೋದವನು, ರಾತ್ರಿ ಹನ್ನೆರಡರ ವರೆಗೆ ಸುಮ್ಮನೆ ಸ್ಕೂಟರ್ ಮೇಲೆ ನಗರ ಪ್ರದಕ್ಷಿಣೆ ಹಾಕಿಸಿದ. ಈಗ ಹತ್ತು ತಿಂಗಳ ಕೆಳಗೆ ಸಕ್ಕರೆ ತಂದುಕೊಡುತ್ತೇನೆ, ಯೋಚನೆ ಮಾಡಬೇಡ ಎಂದು ಹೇಳಿ ಹೋದವನು, ಇನ್ನೂ ತರುತ್ತಲೇ ಇದ್ದಾನೆ.

ಅವನು ಇರುವುದೆಲ್ಲಿ? ಅವನ ಮನೆಯೆಂದು ಹೇಳಲಾದ ಸ್ಥಳಕ್ಕೆ ಹೋಗಿ ಕೇಳಿದರೆ " ಹೌದು ಅವನು ನಮ್ಮ ಹುಡುಗನೇ. ಆದರೆ ಅವನು ಇಲ್ಲಿ ಯಾವಾಗ ಇದ್ದನೋ ಯಾವಾಗ ಮತ್ತೆ ಬರುತ್ತಾನೋ ನಮಗೆ ತಿಳಿದಿಲ್ಲ" ಎನ್ನುತ್ತಾರೆ. ಕಾಲೇಜಿನಲ್ಲಿ ಈರಣ್ಣ ಎಂಬ ಹೆಸರಿನಲ್ಲಿ ಆರೆಂಟು ಜನ ಇದ್ದುದರಿಂದ ಇವನೇ ಹೌದೇ ಅಲ್ಲವೇ ಎಂಬುದು ತಿಳಿಯುವುದು ಹೇಗೆ? ವೀರಣ್ಣನ ಐಡೆಂಟಿಫಿಕೇಶನ್ ಮಾಡಲು ಅವರ ಅಣ್ಣನೆಂದು ವೀರಣ್ಣನೇ ಹೇಳಿದ ಕರ್ಬಿಯ ಅಂಗಡಿಗೆ ಹೋದೆ.

ಆ ದಿವಸ ಭಾನುವಾರ. ರಸ್ತೆಯ ತುಂಬಾ ಸಂತೆಯ ಲಾರಿಗಳೂ ಜನಗಳೂ ಕಿಕ್ಕಿರಿದು ಸೇರಿದ್ದರು. ಕರ್ಬಿಯ ಅಂಗಡಿ ಇನ್ನೂ ನೂರು ಗಜ ದೂರದಲ್ಲಿತ್ತು. ನನ್ನೆದುರಿಗೆ ಎರಡು ಸಾಲಾಗಿ ಲಾರಿಗಳು ನಿಂತಿದ್ದವು. ನಾನು ಹೋಗುತ್ತಿದ್ದ ದಿಕ್ಕಿನಲ್ಲೇ ಒಂದು ಕಾರು ಹೋಯಿತು. ಕರ್ಬಿಯ ಅಂಗಡಿಯೆದುರು ನಿಂತಂತೆ ಕಾಣಿಸಿತು. ಕಾರು ನಿಂತ ನಾಲ್ಕಾರು ಸೆಕೆಂಡಿನಲ್ಲೇ ಒಂದು ಆಕ್ರಂದನ ಧ್ವನಿ. ಅಲ್ಲೆಲ್ಲೋ ವೀರಣ್ಣನ ಸ್ಕೂಟರ್ ಗುಟುರು ಹಾಕುತ್ತಿತ್ತು. ಕರ್ಬಿಯ ಅಂಗಡಿಯ ಕಡೆಗೆ ಓಡಿ ಹೋದೆ. ಹತ್ತಾರು ಜನ ಹಾ ಹಾಕಾರ ಮಾಡುತ್ತಾ, ಚರಂಡಿಯ ಒಳಗಿನಿಂದ ಒಬ್ಬ ಸೂಟ್‌ಧಾರಿಯನ್ನು ಎತ್ತಿದರು. ಆತ ಗಣ್ಯ ವ್ಯಕ್ತಿ. ಊರಿನ ಓವರ್ ಓಷಿಯಾನಿಕ್ ಆ್ಯಂಡ್ ಟ್ರಾನ್ಸ್ ಪ್ಯಾಸಿಫಿಕ್ ಬ್ಯಾಂಕ್ ಬ್ರ್ಯಾಂಚಿನ ಮ್ಯಾನೇಜರು. ಅವನನ್ನು ಕೆಡವಿದ ವೀರಣ್ಣ, ಕರ್ಣಾವಸಾನಕ್ಕೆ ಮೊದಲು ರಥದಲ್ಲಿ ಕುಳಿತು ಬಾಣ ಪ್ರಯೋಗ ಮಾಡಿದ ಅರ್ಜುನನಂತೆ ಸ್ಕೂಟರಿನಮೇಲೆ ಕುಳಿತಿದ್ದ.

ಮ್ಯಾನೇಜರಿಗೆ ಶೈತ್ಯೋಪಚಾರ ಮಾಡಲು ಕರ್ಬಿ ಬಂದ. ಡಿಕ್ಕಿ ಹೊಡೆದವನಾರು ಎಂದು ಅವರು ಅವನನ್ನು ಕೇಳಿದರು " ಯಾವ ಪಿ...ಮಗನೋ ಯಾರು ಬಲ್ಲರು. ಇಂಥಾ ಮಂಗಗಳು ಸಾವಿರ ಜನ" ಎಂದು ಕರ್ಬಿ ಹೇಳಿ " ನಡ್ಡ್ಯಲೇ ಮಂಗಾ" ಎಂದು ವೀರಣ್ಣನಿಗೆ ಹೇಳಿದ. ವೀರಣ್ಣ ನನ್ನನ್ನೂ ಸ್ಕೂಟರಿನ ಮೇಲೇರಿಸಿಕೊಂಡು ಗಾಡಿ ಬಿಟ್ಟ. ನನ್ನ ಸಂಶಯ ಹಾಗೇ ಉಳಿಯಿತು. ವೀರಣ್ಣ ಪರೀಕ್ಷೆಗೆ ಹಣ ಕಟ್ಟಿ ಬಂದ ಒಂದು ತಿಂಗಳ ನಂತರ ನಮ್ಮ ಊರಿನಲ್ಲಿ ಹಸ್ತ ಕೌಶಲ್ಯೋತ್ಪಾದಿತ ವಸ್ತು ಪ್ರದರ್ಶನ ನಡೆಯಿತು. The Amber Muddle Mahal, Spinsters booth, Funds ditch, words galore, Account

breakdown ಎಂಬಿವೇತ್ಯಾದಿ ವಿಭಾಗಗಳಿದ್ದ ಆ ವಸ್ತು ಪ್ರದರ್ಶನದ ಮುನ್ನಾ ದಿನ ನಮ್ಮೂರಿನ ಕನ್ನಡ ಯುವಜನ ಸಂಘದವರು ಪ್ರತಿಭಟನಾ ಸಭೆಯೊಂದನ್ನು ನಡೆಸಿ, ವಸ್ತು ಪ್ರದರ್ಶನ ವಿಭಾಗಗಳ ಹೆಸರನ್ನು ಕನ್ನಡದಲ್ಲೇ ಬರೆಸಬೇಕೆಂಬ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಹೊರಟರು.

" ನಾವು ಬೋಡ್ರು ಬರೆಯಲ್ಪಡುತ್ತೇವೆ"

" ಕೆನಡನಲೇ ಬೋಡ್ರು ಬರೆಸಲ್ಪಡಿರಿ" ಎಂಬ ಘೋಷಣಾ ಪಟಗಳನ್ನು ವೀರಣ್ಣ ಹಿಡಿದು ಊರು ತುಂಬಾ ಲಾರಿಯಲ್ಲಿ ತಿರುಗಾಡಿದ.

ಅದೇ ಪ್ರದರ್ಶನಕ್ಕೆ ನಾನು ಹೋದಾಗ ಅಲ್ಲಿ ತಾಳೆಬೆಲ್ಲದ ಮಾರಾಟ ಮಾಡುವವರ ಜೊತೆಗಿದ್ದ.

" ಈರಣಾ, ಇಂಗ್ಲೀಸೋ?" ಎಂದು ಕೇಳಿದೆ.

" ನೀನು ಇರ್ಬ್ಬಕಾರೆ ನಂಗೇನ್ಭಯಾ? ಎಂದು ಅವನು ಕೇಳಿದ.

* * * *

ಪ್ರದರ್ಶನ ಮುಗಿದಮೇಲೆ ಅವನು ಒಂದು ದಿನ ನನ್ನ ಬಳಿಗೆ ಬಂದು

" ಬೇಕಾದ್ದಾಗ್ಲಿ, ಇವೊತ್ನಿಂದ ಓದೇ ತೀರ್ತೀನಿ. ನಮ್ಮ ಮೇಷ್ಟರ ಹತ್ರ ಪುಸ್ತ್ಕ ಇಸ್ಗಂಬಾ ಎಂದ.

" ಆಗಲಿ" ಎಂದು, ಕಾಲೇಜು ಮೇಷ್ಟರ ಬಳಿ ಹೋಗಿ ಪುಸ್ತಕ ಕೇಳಿದೆ.

"ಯಾರಿಗೆ ಪುಸ್ತಕ?" ಎಂದರು.

" ಈರಣ್ಣನಿಗೆ" ಎಂದೆ.

"ಯಾತಕ್ಕೆ?"

"ಸರಿ ಹೋಯಿತು ಸರ್, ಓದುವುದಕ್ಕೆ"

" ಅವನಿಗೆ ಓದುಬೇಕೇ?"

" ತಾವೇ ಅಪ್ಪಣೆ ಕೊಡಿಸಬೇಕು."

ಅವನಿಗೆ ಓದುವುದು ಬೇಕಾಗಿಯೇ ಇಲ್ಲ?

" ತಾವು ಅವನಿಗೆ ಏನು ಕಲಿಸಿದಿರಿ?

" ನೀವೇಕೆ ಅವನ ಪರವಾಗಿ ವಾದಿಸುತ್ತೀರಿ"

"ಏನು ಮಾಡುವುದು ಗುರುಗಳೇ, ನಮ್ಮ ಹುಡುಗ"

"ಯಾವ ಪುಸ್ತಕ ಬೇಕು?"

ಈರಣ್ಣ ಹೇಳಲಿಲ್ಲ. ನಾನು ಕೇಳಲಿಲ್ಲ! ನಿಮಗೇ ಗೊತ್ತಿದೆಯಲ್ಲಾ?" ಈರಣ್ಣನ ಇಂಗ್ಲೀಷ್ ಗುರುಗಳು ಹತ್ತು ನಿಮಿಷ ಕಾಲ ತಲೆ ಕೆರೆದುಕೊಳ್ಳುತ್ತಾ ಯೋಚಿಸಿದರು.

"ಅವನು ಸೆಕೆಂಡ್ ಬಿ. ಎಸ್ಸಿಯಲ್ಲಿದ್ದುದು ಎರಡು ವರ್ಷಗಳಕೆಳಗೆ. ಆಗ ಹ್ಯಾಂಲೆಟ್ ಇತ್ತು. ಈಗ ಮ್ಯಾಕ್‌ಬೆತ್ ಪೊಯೆಟ್ರಿ ಥೀಂಜಾಗಿದೆ. ನಾಂಡಿಟೈಲ್ ಥೀಂಜು; ಎಲ್ಲಾ ಬದಲಾಗಿದೆ"

" The old order changeth ; ಎಂದೆ

"ನಿಮಗೆ ಕೊಟ್ಟರೆ, ನಾನು ಪ್ರಿಪರೇಷನ್ ಮಾಡಿಕೊಳ್ಳುವುದಕ್ಕೆ ಏನು ಮಾಡಲಿ ?"

"ಸ್ವಾಮಿ, ನನಗೆ ಅದೆಲ್ಲ ತಿಳಿಯದು. ಈರಣ್ಣನಿಗೆ ಬೇಕು ಕೊಡಿ. ಪರೀಕ್ಷೆ ಮುಗಿದ ಮರುದಿನವೇ ನಿಮಗೆ ಕೊಡುತ್ತೇನೆ."

ಪುಸ್ತಕಗಳನ್ನು ತಂದಿಟ್ಟುಕೊಂಡ ಎಷ್ಟೋ ದಿವಸದಮೇಲೆ ವೀರಣ್ಣ ಸಿಕ್ಕಿದ. ತಾನು ಇನ್ನು ಓದಿಗೆ ಆರಂಭಿಸುವುದಾಗಿ ಹೇಳಿದ. ಪುಸ್ತಕಗಳನ್ನು ಕೊಡಲು ಅವನನ್ನೂ ಕರೆದುಕೊಂಡು ಮನೆಗೆ ಹೊರಟೆ

ದಾರಿಯಲ್ಲಿ ಶಿವು ಸಿಕ್ಕಿದ. ಕಾಗದವೊಂದನ್ನು ಕೊಟ್ಟು "ಏನೈತೆ ಹೇಳೋ ಈರಾ" ಎಂದು ಸ್ವಲ್ಪ ಹೊತ್ತು ವಾಚಾಮಗೋಚರವಾಗಿ ಬೈದ. ಈರಣ್ಣ ಅದನ್ನು ಬಹಳ ಹೊತ್ತು ಓದುತ್ತಿದ್ದು,

" ಜಿಲ್ಲಲೇ, ಯಾರ ಸ್ಕೂಟರ್ ಇಸ್ಗಂಬಂದಿದ್ದೆ ?" ಎಂದ.

" ನಾನ್ಯಾಕೆ ಇಸ್ಗಂಬರ್ಲಿ ?"

" ವಾಪಸ್ ತಂದುಕೊಡು ಇಲ್ದಿದ್ರೆ ನಾಕು ಸಾವ್ರ ಕೊಡು ಅಂತ ಬರ್ದತೆ"

" ತಲೆ ನೆಟ್ಗೈತೋ ಇಲ್ಲೋ ?"

" ನೀನಾರ ನೋಡು" ಎಂದು ಈರಣ್ಣ ನನಗೆ ಕೊಟ್ಟ.

" ದುಡ್ಡು ಕಟ್ಟಿ, ಡೆಲಿವರಿ ತಗೊ ಅಂತ ಬರ್ದದೆ" ಎಂದೆ ನಾನು ಆ ಕಾಗದವನ್ನು ನೋಡಿ.

" ಲೆ ಈರ, ತೆಪರ್ಗ್ಗಾ, ಅದ್ಕೇ ಫೇಲಾಗ್ಯತಲೆ ನಿಂದು ನಡ್ಯೋ, ಸ್ಕೂಟರ್ ತರನಾ" ಎಂದ ಶಿವು.

ಷೇಕ್ಸ್‌ಪಿಯರನ ಆತ್ಮ ಉಸಿರುಕಟ್ಟಿ ಸ್ತಬ್ಧವಾಗಿ ಕಾದುನಿಂತಿತ್ತು. ಮೈಸೂರು ವಿಶ್ವವಿದ್ಯಾಲಯ ಅತ್ಯಂತ ಕುತೂಹಲದಿಂದ ಬಾಯಿ ತೆರೆದು ಕಾದಿತ್ತು. ಈರಣ್ಣನ ಗುರುಗಳ ವ್ಯಂಗ್ಯಧ್ವನಿ ನನ್ನ ಬುರುಡೆಯ ಹಿಂಬದಿಯಲ್ಲಿ ವಿಕಟಾಟ್ಟ ಹಾಸ ಮಾಡುತ್ತಿತ್ತು.

ಈರಣ್ಣ " ನಡ್ಯಲೇ ಹೋಗನ" ಎಂದು ಹೊರಟೇಬಿಟ್ಟ.

(ಸಶೇಷ)

—ಅ. ರಾ. ಸೇ.

ದೇವರು ಮಜದಲ್ಲಿದ್ದಾನೆ

ಪ್ರಾಣೇಶ ನನ್ನನ್ನು ಕಂಡಾಗಲೆಲ್ಲ ಮಾತು ಮಾತಿಗೆ 'ನಿನಗೇನಯ್ಯ ಮಜ ವಾಗಿದ್ದೀಯ' ಎಂದು ತಿವಿಯುತ್ತಾನೆ. ಅದೊಂದು ರೋಗ ಎಂದುಕೊಂಡು ನಾನೀಗ ಅವನೊಡನೆ ಆ ಕುರಿತು ವಾದಿಸುವುದನ್ನು ಬಿಟ್ಟಿದ್ದೇನೆ. ಆದರೆ ಈಗ ಆತ 'ಮಜಾದಲ್ಲಿದ್ದಾನೆ' ಅಂತ ಬೇರೊಬ್ಬನನ್ನು ಟೀಕಿಸಲು ತೊಡಗಿದ್ದಾನೆ.

ಆತ ಪ್ರಾರಂಭಿಸುವುದನ್ನು ನೋಡಿ:

"ಲೋಹಿಯಾ ಹೇಳಿದರಲ್ಲ ಮೂರಾಣೆ ಸಮಾಚಾರವನ್ನ...."

"ಸರಿ, ಅವರು ಮತ್ತೇನು ತಾನೆ ಹೇಳಿಯಾರು ಬಿಡು."

"ಮೂರನೆ ಯೋಜನೆಯಲ್ಲಿ National Income ಪ್ರಥಮ ವರ್ಷಕ್ಕಿಂತ ಕಡಮೆಯಂತೆ...."

"ಹೊಟ್ಟೆಗೆ ಹಾಲು ಹುಯ್ದುಕೊಳ್ಳೋ ಸುದ್ದಿ ಅನ್ನು."

"ಆದರೆ .."

"ಆದರೆ ?...."

"ಆದರೆ ದೇವರು ಮಾತ್ರ ಎಲ್ಲ ಕಡೆಗಳಲ್ಲೂ ಮಜವಾಗಿರುವ ಹಾಗಿದೆಯಲ್ಲ."

ಎಲಎಲಾ ಇವನಿಗೆ ದೇವರ ಪ್ರಸಾದದ ತಿಂಡಿಯನ್ನು ಕೊಟ್ಟಿದ್ದೇ ತಪ್ಪಾಯಿತು ಎಂದುಕೊಂಡೆ. ಕಹಿ ಕಾಫಿಕೊಟ್ಟು ಸಾಗಹಾಕಬೇಕಿತ್ತು. ರುಚಿರುಚಿಯಾದ ಚರುಪುಕೊಟ್ಟು ಈತನಿಗೆ ದೇವರ ಮೇಲೆ ಕಣ್ಣು ಬೀಳುವಂತಾಯಿತು.

ನಾನು ಹೀಗೆ ಯೋಚಿಸುವಷ್ಟರಲ್ಲಿ ಆತ—"ನಿನಗೇನೂ ಚಿಂತೆ ಬೇಡ.... ಚರುಪು ರುಚಿಯಾಗಿದೆ ದೇವರು ಮಜಾದಲ್ಲಿದ್ದಾನೆ ಎಂದು ಅದನ್ನು ಕಂಡೇ ಅನ್ನಿಸಿದ್ದು" ಎಂದ ಪ್ರಾಣೇಶ.

ಅವನ ಬಾಯಲ್ಲಿ ಏನೆಲ್ಲ ಬರುತ್ತೆ ನೋಡೋಣ ಎಂದು ನಾನು ಸುಮ್ಮನೆ ತಲೆಯಾಡಿಸುತ್ತ ಕುಳಿತೆ.

"ತಿರುಪತಿ ತಿಮ್ಮಪ್ಪ, ಮತ್ತೆ ಇನ್ನು ಕೆಲವರು ರಾಶಿ ರಾಶಿ ಕಾಣಿಕೆ ಸುಲಿಸಿಕೊಂಡು ಕೋಟ್ಯಾಧೀಶ್ವರರಾಗಿ ಮೆರೀತಾ ಇದ್ದರು. ಈಗ ಯಾಕೋ ಊರೂರು

ಗಳಲ್ಲಿ ದೇವರುಗಳಿಗೆ ಮಜಾಮಾಡೋ ಮನಸ್ಸಾಗಿದೆ. ಎಲ್ಲಿ ನೋಡಿದರೂ ದೇವಸ್ಥಾನ ಜೀರ್ಣೋದ್ಧಾರ ಸಮಿತಿಗಳೆ! ಎಲ್ಲಿ ಕೇಳಿದರೂ ಬ್ರಹ್ಮಕಲಶ, ಅಷ್ಟಬಂಧ ಆಗಲೇಬೇಕು, ಇಲ್ಲದಿದ್ದರೆ ಊರಿಗೆ ಅನಾಹುತ ತಪ್ಪದು ಎಂಬ ಅಲ್ಟಿಮೆಟಂ! ಮಾತ್ರವಲ್ಲ ಎಲ್ಲವೂ ಸಾವಿರ ಗಟ್ಟಲೆ ಖರ್ಚಿನ ಬಾಬ್ತುಗಳೇ. ಅಗ್ಗದಲ್ಲಿ, ಚುಟುಕಿನಲ್ಲಿ, ಸಂಕ್ಷೇಪದಲ್ಲಿ, ಶಾಸ್ತ್ರವಿಧಿಗಾಗಿ ಮಾಡಿದರೆ ಸಾಲದೆ ಎಂದು ಮುಂತಾಗಿ ಉಸಿರೆತ್ತಿದರೆ ರೇಗಿಬೀಳುತ್ತಾರೆ. ದೇವರ ಕೆಲಸ; ಅದ್ಧೂರಿಯಾಗಿ ನಡೆಯಬೇಕು ಎಂದು ಟಿಕೆಟ್ ಪುಸ್ತಕ ಮುಂದೆ ಮಾಡುತ್ತಾರೆ. ರಶೀದಿ ಬರೆದು ಹರಿದೇ ಕೊಡುತ್ತಾರೆ ದುಡ್ಡು ಕೊಡುವೆನೆನ್ನುವ ಮೊದಲೆ, ಐವತ್ತು ಸಾವಿರ ಜನಕ್ಕೆ ಸಂತರ್ಪಣೆ ನಡೆಯಲೇ ಬೇಕಂತೆ. Poor feeding ಎಂಬ ಮಂತ್ರ ಜಪಿಸುವವರಿಗೆ ಇಲ್ಲ ಎನ್ನಲುಂಟೆ? ದೇವರಿಗೆ ಇದೂ ಒಂದು ಮಜ! Poor feeding! ಅದಕ್ಕೇ ಆತ ಸಾಕಷ್ಟು ಮಂದಿ ಬಡವರನ್ನು ನಮ್ಮ ದೇಶದಲ್ಲಿಟ್ಟುಕೊಂಡಿದ್ದಾನೆ....ಅಂದ ಹಾಗೆ ಉಪ್ಪಿಲಿಯಪ್ಪನಿಗೂ ಭೂಮಿತಾಯಿಗೂ ಕುಂಭಕೋಣದವರ ಕೋಟಿ ಅರ್ಚನೆ ಮಾಡಿದ್ದೇ ಮಾಡಿದ್ದು. ಕುಂಭಕೋಣದವರು ಮಾಡದೆ ಇನ್ನು ಯಾರು ಮಾಡಬೇಕು ಕೋಟಿ ಅರ್ಚನೆ? ಆದರೆ ಮದರಾಸಿನಲ್ಲಿ ವೈದೀಶ್ವರನಿಗೂ ನಾಲಗೇಲಿ ನೀರೂರಿತಲ್ಲ. ಆತಗೂ ಕೋಟಿ ಅರ್ಚನೆ ಪ್ರಾರಂಭವಾಗಿದೆ. ಮೊನ್ನೆ Morarji or no Morarji ಅಂತೆ ನಮ್ಮ ದುರ್ಗಾದೇವಿಗೆ ಸಾವಿರ ಸವರನ್ನು ಗಳ ಸರ ಅರ್ಪಿಸಿಯೇ ಬಿಟ್ಟರು. ಉಡುಪಿಯಲ್ಲಿ ಕೃಷ್ಣನಿಗೆ ಬೆಳ್ಳಿ ತೇರಂತೆ. ನಮ್ಮೂರಲ್ಲಿ ಗುಡಿಯ ಬಾಗಿಲಿಗೆಲ್ಲ ಬೆಳ್ಳಿ ಬಡಿದ ಒಬ್ಬ ಸಕ್ಕರೆ ಗುದಾಮಿನ ಒಡೆಯ. ಅವನೇ ಕಳಿಸಿದ್ದಲ್ಲವೇ ಈ ಪ್ರಸಾದ. ?"

"ಆತನಲ್ಲದೆ ಇನ್ನು ಯಾರು ಕೊಡಬೇಕಯ್ಯ ಸಾವಿರಾರು ಜನರಿಗೆ ಸಕ್ಕರೆಯಿಂದ ತಯಾರಿಸಿದ ಈ ಚೆರುಪನ್ನ ಸಕ್ಕರೆ ಕ್ಷಾಮದ ಈ ಕಾಲದಲ್ಲಿ? ಗಣೇಶನ ಗುಡಿಯು ಗೋಡೇನೆಲ್ಲ ಕನ್ನಡಿಗಳಿಂದ ಮುಚ್ಚಿಬಿಟ್ಟಿದಾನೆ ಕಂಡೆಯಾ" ಎಂದು ಕೇಳಿದೆ.

"ಕಾಣದೆ ಉಂಟೆ? ಆದರೆ ಆ ಕನ್ನಡಿಗಳ ನಡುವೆ ನಿಂತಾಗ ಕಾಣಿಸಿದ್ದು ಗಣೇಶನ ಹಾಗೂ ಅವನ ಭಕ್ತರ ಹೊರರೂಪಗಳು ಮಾತ್ರ"

ನನಗೆ ರೇಗಿತು "ಸಾಕು ನಿನ್ನ ಒಡಕು ಮತ್ತೇನು ಅಲ್ಲೆಲ್ಲ ಸುತ್ತ ಮುತ್ತ X-ray ಇಡಿಸಬೇಕಿತ್ತೆ?" ಎಂದು ತಿವಿದೆ.

"ದೇವರು ಇಷ್ಟು ಮಜಾದಲ್ಲಿರುವಾಗ ಒಂದು ತರಹ X-ray ಬೇಕು— ಮನಸ್ಸಿಗಾದರೂ" ಎಂದ ಪ್ರಾಣೇಶ್ ಗುಂಭವಾಗಿ.

ಅದೊಂದು ನವ ಕವಿತೆಯ ತುಣುಕಿದ್ದರೂ ಇರಬಹುದು; ನನಗೆ ಅರ್ಥವಾಗದ ಬಾಬ್ತು ಎಂದುಕೊಂಡು ಸುಮ್ಮನಾದೆ.

—ರಾವಿ.

ಕೊರವೇಶ್ವರ ವಚನಗಳು

(ಕಾಮರಾಜ್ ಪ್ಲ್ಯಾನ್ ಕುರಿತು)

ಸಚಿವ ಜನಕ್ಕೆ ಕೆಟ್ಟ ಕನಸಾಗಿ ಕಾಡಿತ್ತು ಮಾಯೆ; ಪಾರ್ಟಿಯೊಳ ಹೊರಗೆ ಬಿಸಿಬಿಸಿ ಚರ್ಚೆ ನಡೆಸಿತ್ತು ಮಾಯೆ; ಹಲವರ ಆಶೋತ್ತರಗಳನು ಚಿಗುರಿಸಿತ್ತು ಮಾಯೆ, ಹಲವರ ತುಟಿ ನಾಲಗೆಗಳ ಒಣಗಿಸಿತ್ತು ಮಾಯೆ; ಕಾಮನ ಗೆಲಿದವನೆ ನೀನೊಡ್ಡಿದ ಮಾಯೆಯನಾರೂ ಗೆಲಲಾರರು ಎಂದು ಕೆಮ್ಮಿದ ನಮ್ಮ ಕೊರವೇಶ್ವರ.

ತೊಗೋ ಎಂದು ರಾಜೀನಾಮೆಯ ಪ್ರಧಾನಿಯ ಕೈಗಿತ್ತ ಮೇಲೆ ನಾಳೆ ಏನಾಗುವುದೋ ಎಂದು ಅಂಜಿದೊಡೆಂತಯ್ಯ? ಪಾರ್ಟಿ ಕೆಲಸಕೆ ಸಿದ್ಧನೆಂದು ಸಡ್ಡು ಹೊಡೆದಮೇಲೆ ಮಂತ್ರಿ ಪದದ ವೈಭವವ ನೆನೆದು ನಿಡುಸುಯ್ದೊಡೆಂತಯ್ಯ? ಪಕ್ಷದ ನೀತಿಗೆ ತಲೆಬಾಗಿ ಮಂತ್ರಿಪದ ತ್ಯಜಿಸಿದ ಬಳಿಕ ಅವರಿವರು ಅದು ಇದು ಟೀಕಿಸಿದರೆ ನಭಕೆ ಮುಖವೆತ್ತಿ ಥೂ ಎಂದಂತಾಗದೆ? ಎಂಬ ನಮ್ಮ ಕೊರವೇಶ್ವರ.

ಅಯ್ಯಾ ನೀವು ಒಪ್ಪಿದರೂ ಸರಿ, ಒಪ್ಪದಿದ್ದರೂ ಸರಿ; ನಾನಂತೂ ರಾಜೀನಾಮೆಯ ನೀಡಲಾರೆನಯ್ಯ. ಜನಗಳಿರಾ ನೀವು ಒಲಿದರೂ ಸರಿ, ಒಲಿಯದಿದ್ದರೂ ಸರಿ, ನಾನಂತೂ ಈ ಪೀಠವ ಬಿಡಲಾರೆನಯ್ಯ. ಅಯ್ಯಾ ನೀವು ಮೆಚ್ಚಿದರೂ ಸರಿಯೆ, ಮೆಚ್ಚದಿದ್ದರೂ ಸರಿಯೆ, ಜನತಾ ಜನಾರ್ಧನನಿಗೆ ಸೇವೆ ಸಲಿಸಿ ಹರುಷದೊಳಗೋಲಾಡುವುದೆ ಸರಿಯಯ್ಯ ಎಂಬ ರುಸ್ತುಮ ಸತ್ಯಾಗ್ರಹಿಯ ಕಂಡ ನಮ್ಮ ಕೊರವೇಶ್ವರ.

ಕಿಡಿಕಿಡಿ ಕಾರಿದೊಡೆ ಎನಗೆ ಪ್ರಚಾರವಾಯಿತೆಂಬೆನು. ಸುಪ್ರೀಂ ಕೋರ್ಟ್ ಥೂ ಎಂದರೂ ನಾನು ಸುರಕ್ಷಿತನೆಂಬೆನು. ಹೊರೆಹೊರೆಯಾಗಿ ದೂರುಗಳು ಬಂದರೆ ಅವೆನಗೆ ಹಾರಾತುರಾಯಿ ಎಂಬೆನು. ಶಿರಹರಿದು ಬೀಳುವುದಾದರೂ ಸರಿಯೆ, ಶರಮಂಚವೇ ಆದರೂ ಸರಿಯೆ, ಸಚಿವ ಸ್ಥಾನವ ಬಿಡನೆಂಬ ಲೋಕೋಪಕಾರಿಯ ಕಂಡು ಬೆರಗಾದ ನಮ್ಮ ಕೊರವೇಶ್ವರ

ಗಿರಿಯಲ್ಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೇ ನವಿಲು? ಸಚಿವ ಪೀಠದ ಮೆತ್ತೆಯಲ್ಲದೆ ಪಾರ್ಟಿ ಆಫೀಸಿನ ಒರಟು ಕುರ್ಚಿಯ ಮೆಚ್ಚುವುದೇ ಮನವು? ಜೀಯ ಎಂದು ಸುತ್ತುವರಿಯುವವರಿಲ್ಲದೆ ಶೋಭಿಸುವುದೇ ಬದುಕು? ಬಾಳಗುರಿ ಸಚಿವ ಸ್ಥಾನವಿರೆ ಅನ್ಯಕ್ಕೆಳಸುವುವೆ ತನುಮನಗಳ್? ಇಂತು ಚಿಂತಿಸುತ ಟೋಪಿ ತೆಗೆದು ತಲೆಯ ಮೇಲೆ ಕೈಯಾಡಿಸುವ ಅಸಾಮಿಯ ಕಂಡ ನಮ್ಮ ಕೊರವೇಶ್ವರ.

ಎನಗಿಂತ ಸುಖಿಗಳಿಲ್ಲ. ಜನಸ್ತೋಮದ ನಡುವಿದ್ದು ಜನಸೇವೆಯಲ್ಲಿ ನಿರತವಾಗುವುದಕ್ಕಿಂತ ಮಿಗಿಲಿಲ್ಲ. ಶೂಲದ ಮೇಲಣ ಭೋಗದಂತೆ ನಾನಾ ಪೀಕಲಾಟಗಳ ಸಂತೆಯು ನಡುವೆ ಮೆರೆಯುಲೆತ್ನಿಸಿ ಬೆದರಿ ಬೆವರುತ್ತಿರುವುದಕ್ಕಿಂತ ಪಾರ್ಟಿಯೊಳಗಣ ಒಳ ಜಗಳಗಳ ಬಗೆಹರಿಯುಲೆತ್ನಿಸಿ ಹಾಯಾಗಿರುವುದೇ ಲೇಸೆಂದು ಮೆತ್ತಗೆ ಸುಳಿದಾಡುವ ದೊಡ್ಡ ಕೀರ್ತಿಯು ಚಿಕ್ಕ ಮೂರ್ತಿಯೊಂದನು ಕಂಡು ತಲೆದೂಗಿದ ನಮ್ಮ ಕೊರವೇಶ್ವರ.

ಸಚಿವ ಪೀಠದ ಸಾರಥ್ಯವನು ತ್ಯಜಿಸಿದ ಮಾತ್ರಕ್ಕೆ ಕುದುರೆಗಳ ಕಡಿವಾಣವೇನು ಕೈತಪ್ಪಿತೆ? ಸ್ಥಾನ ಯಾವುದಾದರೇನು? ಇದ್ದರೇನು, ಇಲ್ಲದಿದ್ದರೇನು? ಕಡಿವಾಣ ಹಿಡಿದ ಕೈ ಎಲ್ಲಿದ್ದರೇನು? ಏನು ಮಾಡಿದರೇನು? ರಥವೆಲ್ಲ, ರಥವೇರುವ ಪ್ರಮುಖರೆಲ್ಲ ಅವನ ಆಜ್ಞಾನುವರ್ತಿಗಳಯ್ಯ. ದೊಂಬರಾಟವಿದು ಪಾರ್ಲಿಮೆಂಟು ಎಂಬ ನಮ್ಮ ಕೊರವೇಶ್ವರ.

ತಾವಾಗಿ ತ್ಯಾಗಕ್ಕೆ ಮುಂದಾದವರು ಕೆಲವರು; ಮೆರೆಸಿಕೊಂಡು ತ್ಯಾಗ ಮಾಡಿದವರು ಕೆಲವರು; ಜರೆಸಿಕೊಂಡು ತ್ಯಾಗಮಾಡಿದವರು ಕೆಲವರು, ಕತ್ತು ಹಿಡಿದು ತಳ್ಳಿಸಿಕೊಂಡು ಬಿಟ್ಟು ಬಂದವರು ಕೆಲವರು; ಹೊರಬಂದ ಬಳಿಕ ಎಲ್ಲರೂ ತ್ಯಾಗಿಗಳೇ ನಿಜ ಎಂದು ಉಗುಳು ನುಂಗುವ ನಮ್ಮ ಕೊರವೇಶ್ವರ

ಸಚಿವ ಸ್ಥಾನವ ಬಿಟ್ಟುಕೊಟ್ಟು ಪಾರ್ಟಿ ಕೆಲಸಕ್ಕಿಳಿದವರ ತ್ಯಾಗಿಗಳಿ, ಸ್ಥಾನಕ್ಕಂಟಿ ಹಲ್ಲುಕಚ್ಚಿ ಕುಳಿತವರೆ, ಪ್ಲಾನಿನ ಅಧ್ವರ್ಯುಗಳಾದ ಕಾಮನ ಗೆಲಿದವರೆ, ಆತಂಗೊಲಿದವರೆ, ಒಲಿಯದವರೆ ನಿಮ್ಮೆಲ್ಲರ ಬೊಮ್ಮಲಾಟ, ಕೊಕ್ಕಾಟಗಳಿಂದ ದೇಶದ ಭಾಗ್ಯ ಬಲಿತುದನ್ನು ಬಿಸಿ ತೋರಿರಯ್ಯ ಎಂದು ಅಂಗಲಾಚುವ ನಮ್ಮ ಕೊರವೇಶ್ವರ.

ಹುತ್ತವ ಬಡಿದಡೆ ಹಾವು ಸಾಯುಬಲ್ಲುದೇನಯ್ಯ ಅವರಿವರು ಪೀಠ ಬದಲಿಸಿದರೆ ಅತ್ತಿತ್ತ ಓಡಾಡಿದರೆ ಆಡಳಿತದೊಳಗಿನ ಪಕ್ಷದೊಳಗಿನ ಹೊಲಸ ತೊಳೆದಂತಾಯಿತೇನಯ್ಯ. ಅಲ್ಲಿ ಇಲ್ಲಿ ಎಲ್ಲೆಡೆಗಳಲ್ಲಿ ಆತುಮ ಶುದ್ಧಿಯಾಗದೆ ಹೊಲಸೆಂತು ತೊಲಗೀತೆಂದು ತಲೆತುರಿಸುವ ನಮ್ಮ ಕೊರವೇಶ್ವರ.

(ಅಕ್ಕ ಅಣ್ಣನವರಿಗೆ ನಮೋ ಎಂದು)

— ರಾಮು

ಕಾಲರಾಯಣ

ತರ್ಕಾರಿಯೋಳು ತಕರಾರು ಮಾಡ್ತಾ, "ಈ ಬದ್ನೇಕಾಯೊಳಗೆ. ಕಾಲರಾ ಇಲ್ರಿ. ಚೆನ್ನಾಗಿ ಕುದಿಯೋ ನೀರಲ್ಲಿ ತೊಳೆದು ಉಪಯೋಗಿಸ್ರಿ. ಕಾಲರಾ ಬರೋಲ್ರಿ" ಅಂತ ಹೇಳಿದ್ಲು ಬೆಂಗಳೂರಲ್ಲಿ ಕಾಲರಾ ಇದ್ದಾಗ ಬತ್ತಿದ ತರ್ಕಾರೀ ಮಾರ್‍ತಾ!

ಮಾರ್ಕೆಟ್‌ನಿಂದ ಮನೇ ಕಡೆ ಹೊರಟೆ. ಹಾದಿಯಲ್ಲಿ L.M.P. ಓದುತ್ತಿದ್ದ ಗೆಳೆಯ ಸಿಕ್ಕಿದ.

"ಊರಲ್ಲೆಲ್ಲಾ ಕಾಲರಾವಮ್ಮಾ. ಇನಾಕ್ಯುಲೇಶನ್ ಹಾಕಿಸ್ಕೋ ಈಗಲೇ. ನಿಮ್ಮನೆಯೋರ್ನೆಲ್ಲಾ ಕರ್‍ಕೊಂಡ್‌ಬಾ. ಕುಡಿಯೋ ನೀರಿಗೆ ಪೊಟಾಸಿಯಂ ಪರ್ಮ್ಯಾಂಗನೇಟ್ ಹಾಕ್ಕೊಂಡ್ ಕುಡಿ ಅಂತ ಸಲಹೆ ಕೊಡುತ್ತಾ ಕೈಕೊಟ್ಟೆ 'ಥ್ಯಾಂಕ್ಸ್' ಎಂದೆ.

ಡ್ರಗ್ಗಿಸ್ಟ್ ಷಾಪಲ್ಲಿ ಪೊಟಾಸಿಯಂ ಪರ್ಮ್ಯಾಂಗನೇಟ್ ತೊಗೊಳ್ತಿದ್ದಾಗ ನನ್ನ ಹಳೇ ದೋಸ್ತ್ ಸಿಕ್ದ. "ನಾನೀವಾಗ ಡ್ರಗ್ ಏಜಂಟಮ್ಮಾ. ನಮ್ಮ ಕಂಪೆನೀದೇ ಈ ಡೆಟ್ಟಾಲ್. ಕಾಲರಾಕ್ಕೆ ಒಳ್ಳೇದು. ಉಪಯೋಗಿಸು ಅನ್ನುತ್ತಾ" ಎರಡು ಬಾಟ್ಲೆ ಕೊಟ್ಟು 'ಟಾಟಾ' ಮಾಡಿ ಕಾಟ ಕೊಟ್ಟ!

ಅವನ್ನೂ ತೊಗೊಂಡು ಹೊರಟೆ. ದಾರಿಯಲ್ಲಿ ನಮ್ಮ ಸ್ಯಾನಿಟರಿ ಇನ್ಸ್ಪೆಕ್ಟರ್ ಸಿಕ್ಕಿದರು. ಮತ್ತೆ ಅದೇ ಕಾಲರಾ ಪುರಾಣ ಹೇಳಿದರು. "ನೀ ಇನ್ನೂ ಹುಡುಗ ಚೆನ್ನಾಗಿ ಬಾಳಿ ಬದುಕಬೇಕು ಇನ್ನೂ ಚಿಕ್ಕ ಪುಟ್ಟ ಸಂಸಾರ. ಕಾಲರಾಕ್ಕೆ ಸಿಕ್ಕೀಯಾ ಜೋಕೆ! ಭಾವಿಗೆ ಬ್ಲೀಚಿಂಗ್ ಪೌಡರ್ ಹಾಕು (ಬೆಂಗಳೂರಲ್ಲಿ ಬಾವೀನೇ ಅಂತ ಬಾಯಿ ಬಿಡಬೇಡಿ—ನಮ್ಮನೇಲಿದೇ!) ಚರಂಡಿ ಮೇಲೂ ಹಾಕು" ಎನ್ನುತ್ತಾ ಎರಡು ಕಿಲೋ ಪ್ಯಾಕೆಟ್ ನನ್ನ ಕೈಗೆ ಕೊಟ್ಟರು.

ಅಂದೇ ಮಧ್ಯಾಹ್ನ ನಾನೂ, ವಿಮಲೂ, ರಾಜೂ, ಗೀತಾ, ವಗೈರೆಗಳೆಲ್ಲಾ ಇನಾಕ್ಯುಲೇಶನ್ ಹಾಕಿಸ್ಕೊಂಡು ವಾಪಸ್ ಬರ್‍ತಿದ್ವಿ. ದಾರೀಲೊಬ್ಬ ಉದ್ದುದ್ದನೇ ಬಾಟ್ಲು ಮಾತಾಡ ಕೂಗ್ತಿದ್ದ.

"ಈ ಫೀನೈಲ್ ಬಾಟ್ಲೆ ನಮ್ಮ ಕಂಪೆನೀದು. ಇದನ್ನು ಉಪಯೋಗಿಸೋ ವಿಧಾನ ಬಾಟ್ಲೆ ಲೇಬಲ್ ಮೇಲಿದೆ. ಕೇವಲ ಐವತ್ತು ನಯೇ ಪೈಸೇ. ಕಾಲರಾಕ್ಕೆ ಇದು ರಾಮಬಾಣ. ಮರಣಕ್ಕೆ ಸಂಜೀವಿನೀ" ಅಂತ ರಾಮಾಯಣಾನೇ ಹೇಳ್ದ.

ಸಂ ನಮ್ಮ ಹೋಂ ಮಿನಿಸ್ಟರ್ ವಿಮಲನ್ಮೋರ ಹುಕುಂ ಮೇಲೆ ಎರಡು ಬಾಟ್ಲ ತೊಗೊಂಡಿದ್ದಾಯ್ತು.


ಮನೇಗೆ ಬಂದ ಮೇಲೆ ಬಾವಿಯೊಳಗೆ ಬ್ಲೀಚಿಂಗ್ ಪೌಡರ್, ಕುಡಿಯೋ ನೀರಿಗೆ ಪರ್ಮಾಂಗನೇಟ್ ಹಾಕಿ ಮನೇನೆಲ್ಲಾ ಡೆಟ್ಟಾಲ್‌ನಿಂದ ಸಾರಿಸಿ, ಇನ್ನೂ ಕಾಲರಾ ಬರೋಲ್ಲಾ ಅಂತ ನಿಟ್ಟುಸಿರು ಬಿಟ್ಟೆವು ಮನೇ ಮಂದೀ ಎಲ್ಲಾ!

"ಅಲ್ರೀ ಮುಸುರೇ ತಿಕ್ಕೋ ಜಾಗದಲ್ಲಿ ಏನೂ ಹಾಕ್ಲೇ ಇಲ್ವಲ್ರೀ! ಅಂದ್ಹಾಗೇ, ಆ ಮುಸುರೇ ತಿಕ್ಕೋಳು ಶ್ರೀರಾಂಪುರದ ಕಡೇ ಇಂದ ಬರ್ತಾಳ್ರೀ! ಅವಳ್ಮೇಲೂ ಒಂದಿಷ್ಟು ಬ್ಲೀಚಿಂಗ್ ಪೌಡರ್, ಫೀನೈಲ್ ಪ್ರೋಕ್ಷಿಸಿ ನಂತರ ಪಾತ್ರೆ ತೊಳಸಿದರೆ ಕಾಲರಾ ಸಂಪೂರ್ಣ ನಾಶವಾಗುತ್ತೇರಿ, ಅಂತ ಸಲಹೆ ಕೊಟ್ಳು ನಮ್ಮನೆಯಾಕೆ!

ಇನ್ನೆಲ್ಲಿ ಇವಳು ಹಾಗೇ ಮಾಡಿಬಿಡ್ತಾಳೋ ಅಂತ ಹೆದರಿ ಮಹಡಿ ಮೇಲಿನ ಕಿಟಕಿ ಇಂದಾಚೆ ಉಳಿದಿದ್ದ ಫೀನೈಲ್, ಬ್ಲೀಚಿಂಗ್ ಪೌಡರ್ ಎಲ್ಲಾ ಚೆಲ್ಲಿದೆ.

ಎರಡು ಸೆಕೆಂಡ್ ಆದಮೇಲೆ ಕೆಳಗಿನಿಂದ ಆರ್ತನಾದ ಬಂತು. ಏನೆಂದು ಬಗ್ಗಿ ನೋಡಿದರೆ ನನ್ನ ಗ್ರಹಚಾರಗ್ಕೆ ಆ ಶ್ರೀರಾಂಪುರದಾಕೇನೇ ಕೆಳಗೆ ಪಾತ್ರೇ ತೊಳೀತಿರ್ಬೇಕೇ! ಅಯ್ಯೋ ಶ್ರೀರಾಮ!

—ಹಾ. ವ್ಯ. ಸೂರಿ



ನಾಲ್ಕನೇ ಹೆಂಡತಿ, ಜೋಯಿಸರೇ? ಹೆಂಗೆ ದಿವಸ!? ಹಂಡುಕ್ಕೆ ಸಕ್ಕರ ಸಿಗುತ್ತಯೋ, ಕವಡೆ ಹಾಕಿ ಹೇಳಿ.

ಏಕಾಂಬರನ ಕಲೆ

ವಿರಾಟ ಭವನದ ಉಪ್ಪರಿಗೆಯ ಮೇಲೆ ಅಂದು ಏನೋ ಗೊಂದಲ ನಡೆಯು ತ್ತಿತ್ತು, ನಮ್ಮ ಖಾಯಂ ಕೋಣೆಗೆ ನಾನು ಹೊಕ್ಕಾಗ. ನನ್ನ ಸ್ನೇಹಿತರ ಪೈಕಿ ಓಂಪುಡಿ ಮತ್ತು ಮದ್ದೂರು ವಡೆ ಮಾತ್ರ, ನೊಣಗಳನ್ನು ಬೆದರಿಸುತ್ತ ಕುಳಿತಿ ದ್ದರು. ನಾನು ನನ್ನ ಮಾಮೂಲು ಕುರ್ಚಿಯಲ್ಲಿ ಕುಳಿತೆ.

" ಪರಶು ! " ಅಂತ ಕೂಗಿದೆ.

ಉತ್ತರವಿಲ್ಲ.

ಓಂಪುಡಿ, ಮದ್ದೂರು ವಡೆ ಅವರ ಕಡೆ ತಿರುಗಿ, ನನ್ನ ಹಣೆಯಲ್ಲಿ ಪ್ರಶ್ನಾ ರ್ಥಕ ಚಿಹ್ನೆ ತೋರಿಸಿದೆ.

"ಪರಶು ಉಪ್ಪರಿಗೆಯಲ್ಲಿ ಸೇವೆ ಮಾಡುತ್ತಿದ್ದಾನೆ." ಅಂದರು ಮದ್ದೂರು ವಡೆ.

" ಉಪ್ಪರಿಗೆಯಲ್ಲಿ ಯಾವುದೋ ಚಲನಚಿತ್ರದ ಸಮಾರಂಭದ ಕೂಟ. ಅದೇ ಗೊಂದಲ. " ಅಂದರು ಓಂಪುಡಿ.

ಐದಾರು ನಿಮಿಷಗಳ ವರೆಗೆ ನಾನೂ ನೊಣಗಳನ್ನು ಅಟ್ಟುತ್ತ ಕುಳಿತೆ. ಉಪ್ಪ ರಿಗೆಯ ಮೆಟ್ಟಲುಗಳಲ್ಲಿ ಯಾರೋ ಇಳಿದ ಸಪ್ಪಳ ಕೇಳಿ ಬಂತು. ನಾವೆಲ್ಲ ಪರಶುವಿನ ನಿರೀಕ್ಷಣೆಯಲ್ಲಿ ಬಾಗಿಲಕಡೆ ನೋಡಿದೆವು ಮಲ್ಲಾರಿರಾಯರು ಬಂದರು. ನೇರ ವಾಗಿ ಹೋಗಿ ಈಶಾನ್ಯ ದಿಕ್ಕಿನಲ್ಲಿದ್ದ ತಮ್ಮ ಮಾಮೂಲು ಕುರ್ಚಿಯಲ್ಲಿ ಕುಳಿತರು. ಮರುಕ್ಷಣವೇ ಪರಶು ಧಾವಿಸಿ ಬಂದ.

" ಕ್ಷಮಿಸಬೇಕು, ಉಪ್ಪರಿಗೆಯಲ್ಲಿ ಕೂಟದ ಪಾರಿಚಾರಿಕೆಯಲ್ಲಿದ್ದೆ. "

— ಅನ್ನುತ್ತಾ ಆಲೂಗಡ್ಡೆ ಉಪ್ಪೇರಿ, ಓಂಪುಡಿ, ಮದ್ದೂರು ವಡೆಗಳನ್ನು ತಂದು ಹಂಚಿದ.

" ಪರಶು ಖಾರದ ಗೋಡಂಬಿಯನ್ನೂ ತಾ. ಉಪ್ಪರಿಗೆಯ ಗ್ರಾಸದಲ್ಲಿ ಖಾರ ಸಾಲದು. " ಅಂದರು ಮಲ್ಲಾರಿರಾಯರು.

"ಓಹೋ ನೀವು ಉಪ್ಪರಿಗೆಯಲ್ಲಿದ್ದೀರೇನು?" ಅಂತ ಓಂಪುಡಿ ವಿಚಾರಿಸಿದರು.

" ಹೌದು, ನನ್ನ ಭಾವಮೈದುನನ ಮಗ ಏಕಾಂಬರ ನನ್ನನ್ನು ಬಲವಂತ ದಿಂದ ಸಮಾರಂಭಕ್ಕೆ ಎಳೆದುಕೊಂಡು ಹೋದ. "

" ಏಕಾಂಬರ? ಅಂದರೆ ರಿಟೈರ್ಡ್ ಜಡ್ಜಿ ತ್ರಿಯಂಬಕರಾಯರ ಅಳಿಯ ಅಲ್ಲವೆ?" ಓಂಪುಡಿ ವಿಚಾರಿಸಿದರು.

" ತ್ರಿಯಂಬಕರಾಯರ ಅಳಿಯ ಅಲ್ಲ. ತ್ರಿವಿಕ್ರಮರಾಯರ ಅಳಿಯ ಅಲ್ಲವೇ?" ಅಂದರು ಮದ್ದೂರು ವಡೆ.

" ತ್ರಿಯಂಬಕ ತ್ರಿವಿಕ್ರಮ ಎರಡೂ ಒಬ್ಬರ ಹೆಸರೇ ! ಅವರು ನ್ಯಾಯಾಧೀಶ ರಾದ್ದರಿಂದ ಹರ ಹರಿಗಳ ನಡುವೆ ಭೇದ ಮಾಡಬಾರದೆಂದು ಇರಡೂ ಹೆಸರುಗ ಳನ್ನು ಚಾಲ್ತಿಯಲ್ಲಿಟ್ಟುಕೊಂಡಿದ್ದರು. ಆದರೆ ತ್ರಿಯಂಬಕ ಅಥವಾ ತ್ರಿವಿಕ್ರಮರಾ ಯರ ಅಳಿಯ, ನನ್ನ ಖಾಸಾ ತಮ್ಮ ಚಿದಂಬರ! ಈಗ ನಾನು ಕೇಳಿದ್ದು ನನ್ನ ಭಾವಮೈದುನನ ಮಗ ಏಕಾಂಬರ ಏಕಾಂಬರನ ವಿಚಾರ."

" ಏಕಾಂಬರರಾಯರು 'ವಿರಹಪ್ರಲಾಪ'ದಲ್ಲಿ ನಟಿಸುತ್ತಾರೆಯೇ ಸ್ವಾಮಿ?" ಅಂತ ಕೇಳಿದ ಪರಶು, ಕುತೂಹಲದಿಂದ.

ಅಷ್ಟು ಹೊತ್ತಿಗೆ ಚೌ ಚೌ, ಖಾರಾ ಬೂಂದಿ, ಪಕೋಡಾ, ಬಾಳೇಕಾಯಿ ಬಜೆ ಎಲ್ಲರೂ ಬಂದಿದ್ದರು. ತಮ್ಮ ಮಾಮೂಲುಗಳನ್ನು ತರಲು ಪರುಶುವನ್ನು ಅಟ್ಟಿದರು.

" ಹೌದು ಅದಕ್ಕಾಗಿಯೇ ಇಂದು ಇಲ್ಲಿ ಇಷ್ಟು ಅದ್ದೂರಿಯ ಸಂಭ್ರಮ ಏಕಾಂ ಬರನದು," ಹೆಮ್ಮೆಯಿಂದ ಮಲ್ಹಾರಿರಾಯರು ಹೇಳಿದರು.

" ಯಾವ ಏಕಾಂಬರ?" ಖಾರಾ ಬೂಂದಿ ಕೇಳಿದರು.

ಪುನಃ ಮೊದಲಿಂದ ನಡೆದ ಸಂಭಾಷಣೆಯನ್ನೆಲ್ಲಾ, ಹೊಸದಾಗಿ ಬಂದ ನಮ್ಮ ಸ್ನೇಹಿತರಿಗೆ ವಿವರಿಸಿದ್ದಾಯ್ತು.

"ಏಕಾಂಬರ, ಸಿನಿಮಾ ನಟನಾಗಿ ಸೇರಿದ್ದೇ ಪ್ರಸಂಗವನ್ನು ಒಂದು ಕಥೆಯಾಗಿ ಬರೆದು, ಚಿತ್ರ ತೆಗೆದಿದ್ದೇ ಆದರೆ, ಪ್ರಾಯಶಃ ಆ ಚಿತ್ರ, "ವಿರಹಪ್ರಲಾಪ"ಕ್ಕಿಂತಲೂ ಯಶಸ್ವಿಯಾಗಿರಬಹುದು!"

"ಷಹಭಾಸ್ !" ಅಂದೆ.

"ಪರಶು—ಸ್ಟ್ರಾಂಗ್ ಕಾಫಿ" ಅನ್ನುತ್ತಾ ಮಲ್ಹಾರಿರಾಯರು, ನಮ್ಮ ಕಡೆ ತಿರುಗಿದರು.

ನಮ್ಮ ಭಾವ ಮೈದುನನ ಮಗ ಏಕಾಂಬರ, (ಮಲ್ಹಾರಿರಾಯರು ಮುಂದು ವರಿಸಿದರು) ತನ್ನ ಮೆಟ್ರಿಕ್ ಪಾಸುಮಾಡಿ, ಪಿ. ಯು. ಸಿ. ಯಲ್ಲಿದ್ದಾಗಲೇ ಕವಿ ಯಾಗಿದ್ದ. ಪಂಪ, ರನ್ನ, ನಾರಣಪ್ಪ, ಲಕ್ಷ್ಮೀಶ, ಸರ್ವಜ್ಞ, ಡಿ.ವಿ.ಜಿ., ಬೇಂದ್ರೆ, ಕುವೆಂಪು—ಇವರೆಲ್ಲರ ಕವಿತೆಗಳನ್ನೆಲ್ಲಾ ಒಂದಕ್ಷರ ಬಿಡದೆ ಓದಿದ್ದ. ಯಾವ ಒಬ್ಬ ಕವಿಯ ಮಾರ್ಗವನ್ನೂ ಪಟ್ಟಾಗಿ ಹಿಡಿಯದೆ, ಎಲ್ಲರ ಭಾವಗಳನ್ನೂ, ಎಲ್ಲರ

ಶೈಲಿಗಳನ್ನೂ ಭಟ್ಟಿ ಇಳಿಸಿ, ತನ್ನ ಕವಿತೆಗಳಲ್ಲಿ ಪ್ರಯೋಗಮಾಡುತ್ತ ಬಂದ. ಎಷ್ಟೋ ಬಾರಿ, ತಾನು ಭಾವಪರವಶನಾಗಿ ರಚಿಸಿದ್ದ ಕವಿತೆಗಳ ಅರ್ಥ ತನಗೇ ಆಗದಿದ್ದುದೂ ಉಂಟೆಂದು ಹೇಳುತ್ತಾನೆ. ನನಗೆ ಅಷ್ಟಾಗಿ ಕವನಗಳ ಮೇಲೆ ಭ್ರಮೆ ಇಲ್ಲ. ಆದ್ದರಿಂದ ಏಕಾಂಬರ ತನ್ನ ಕವಿತೆಗಳನ್ನು ನನ್ನ ಮುಂದೆ ಓದಿಲ್ಲ. ಆದರೆ ಅವನ ಸೋದರತ್ತೆ—ಅಂದರೆ ನನ್ನಾಕೆಯ ಮುಂದೆ ಆಗಾಗ—ನಾನು ಮನೆಯಲ್ಲಿಲ್ಲದಿದ್ದಾಗ ಏಕಾಂಬರ ತನ್ನ ಕವಿತೆಗಳನ್ನು ಓದಿ ಮೆಚ್ಚುಗೆ ಪಡೆದಿದ್ದಾನೆ—ಅಂತ ನನಗೆ ಅನುಮಾನ.

ಒಂದು ದಿನ ತನ್ನ ಕವನ ಸಂಗ್ರಹದ ಇಡೀ ಕಟ್ಟನ್ನು "ಮೇಘರಾಜ ಕಾವ್ಯ ಮಂದಿರ" ಪ್ರಕಟನಾಲಯಕ್ಕೆ ತೆಗೆದೊಯ್ದು, ಪ್ರಕಾಶಕ ಸರ್ವೋತ್ತಮರಾಯರನ್ನು ಭೇಟಿ ಮಾಡಿದ. ತನ್ನ ಕವನಗಳ ಬಗ್ಗೆ ಎರಡು ಘಂಟೆ, ಮೂವತ್ತೇಳು ನಿಮಿಷಗಳ ವರೆವಿಗೆ ಭಾಷಣಮಾಡಿದ.

"ಈ ಕವನಗಳನ್ನು ಪ್ರಕಟಿಸಿ ಕೃತಾರ್ಥರಾಗಿ"—ಅಂತ ಸರ್ವೋತ್ತಮರಾಯರಿಗೆ ಸಲಹೆ ಇತ್ತ.

"ನಮ್ಮಿಂದ ಸಾಧ್ಯವೇ ಇಲ್ಲ." ಅಂದರು ಸರ್ವೋತ್ತಮರಾಯರು.

"ನೀವು ಪ್ರಕಟಿಸುತ್ತೇವೆಂದು ನನಗೆ ಭರವಸೆ ನೀಡುವವರೆವಿಗೂ ನಾನಿಲ್ಲಿಂದ ಏಳುವುದಿಲ್ಲ!" ಎಂದು ಹಠ ಹಿಡಿದ ಏಕಾಂಬರ.

"ಚಪ್ರಾಸೀ!" ಅಂತ ಕೂಗಿದರು ಸರ್ವೋತ್ತಮರಾಯರು.

ಚಪ್ರಾಸಿ ಬಂದ.

"ಏಕಾಂಬರ ರಾಯರನ್ನೂ, ಅವರ ಕಾಗದದ ಮೂಟೆಯನ್ನೂ ಹೊರಕ್ಕೆ ಬಿಸಾಡು!" ಅಂದರು.

ಮರುಕ್ಷಣದಲ್ಲಿಯೇ, "ಮೇಘರಾಜ ಕಾವ್ಯ ಮಂದಿರ" ಪ್ರಕಟನಾಲಯದ ವರಾಂಡಾದಿಂದ, ಮೈ ತಡವಿಕೊಂಡು ಎದ್ದು, ತನ್ನ ಕವನಗಳ ಮೂಟೆ ಹೊತ್ತು, ಏಕಾಂಬರ ಮನೆ ಸೇರಿದ.

ಒಂದು ದಿನ ಕಬ್ಬನ್ ಪಾರ್ಕಿನಲ್ಲಿ ಕುಳಿತು, ಈ ಶೂನ್ಯ ಪ್ರಪಂಚದ ಬಗ್ಗೆ ಮೆಲುಕುತ್ತಾ ಇದ್ದಾಗ, ಏಕಾಂಬರನಿಗೆ ದೂರದಲ್ಲಿ ಅಠಾರಾ ಕಚೇರಿಯ ಕಡೆಯಿಂದ, ಒಬ್ಬ ಕಾಲೇಜು ಕುವರಿ ಒಂದು ಜೂಲು ನಾಯಿ ಮರಿಯನ್ನು ನಡೆಸಿಕೊಂಡು ತನ್ನ ಕಡೆಗೆ ನಡೆದುಬರುತ್ತಿದ್ದುದು ಕಾಣಿಸಿತು. ಆ ಕ್ಷಣದಲ್ಲಿಯೇ ಏಕಾಂಬರನ ಮನಸ್ಸಿನಲ್ಲಿ ಕವನದ ಮೊಳಕೆ ಹುಟ್ಟಿಕೊಂಡಿತು.

"ಏನು ಚೆಲುವೆ ನೀರೆ
ಶ್ವಾನ ಮರಿಯು ಬೇರೆ!

ಹೊನ್ನ ವರ್ಣ ಸೀರೆ
ಎನ್ನ ಮನದ ಸೂರೆ!

ಏಕಾಂಬರ ತನ್ನ ಕಿವಿಯನ್ನು ತಾನೇ ನಂಬಲಿಲ್ಲ. ಇಷ್ಟು ನಾಜೂಕಾಗಿ ಸ್ಫೂರ್ತಿಯನ್ನು ಯಾವ ಕಾವ್ಯ ದೇವತೆಯೂ, ಯಾವ ಕವಿಗೂ ಕೊಟ್ಟಿರಲಿಕ್ಕಿಲ್ಲ ವೆಂದು ಅಂದುಕೊಂಡ. ಊರ್ವಶಿ ಕೂಡ ಹಿಂದೆ ಕಾಳಿದಾಸನಿಗೆ ಈ ರೀತಿ ಸ್ಫೂರ್ತಿ ಕೊಟ್ಟಿರಲಾರಳು—ಅಂತ ಅಂದುಕೊಂಡ. ಕನಕದಾಸ, ದಮಯಂತಿಯ ವರ್ಣನೆ ಮಾಡುವಾಗ ಕೂಡ ಈ ರೀತಿ ಕವಿತೆಯ ಪಟ್ಟು ಹಿಡಿದಿರಲಿಕ್ಕಿಲ್ಲವೆಂದುಕೊಂಡ. ಇಷ್ಟೆಲ್ಲ ಯೋಚಿಸುವ ಹೊತ್ತಿಗೆ, ತನ್ನ ಜೂಲು ನಾಯಿಮರಿ ಜೊತೆಗೆ ಆ ಕುವರಿಯೇ ಏಕಾಂಬರನ ಹತ್ತಿರ ಸುಳಿದಳು. ಕುಳಿತಿದ್ದ ಏಕಾಂಬರ ಎದ್ದ. ಕುವರಿಗೆ ಎದು ರಾಗಿ ನಿಂತು, ತನ್ನ ನೂತನ ಕವನವನ್ನು ಆಕೆಗೆ ಒಪ್ಪಿಸಿದ. ಆಕೆಯ ಅಭಿಪ್ರಾಯ ಯಾಚಿಸಿದ.

"ಬಹಳ ಚೆನ್ನಾಗಿದೆ ಮಿಸ್ಟರ್!" ಅಂದಳು ತನ್ನ ಚೆಲ್ಲುನೋಟ ಬೀರುತ್ತಾ.

ಹಾಗಿದ್ದರೆ ನೀವೇಕೆ ನನ್ನನ್ನು ಲಗ್ನವಾಗಬಾರದು ಅಂದ ಏಕಾಂಬರ.

ತಡಮಾಡಿದರೆ ಸ್ಫೂರ್ತಿ ಎಲ್ಲಿ ಕಡಿಮೆಯಾಗುತ್ತೋ ಅನ್ನುವ ಭಯದಿಂದ ಏಕಾಂಬರ ತಡಮಾಡಲಿಲ್ಲ.

"ಧಾರಾಳವಾಗಿ ಮಿಸ್ಟರ್. ಆದರೆ ನಿಮ್ಮ ಕವನ ಬಿಟ್ಟರೆ ಬೇರೇನು ಆಸ್ತಿ ಇದೆ ನಿಮ್ಮಲ್ಲಿ?" ಅಂತ ಕೇಳಿದಳು. ಧೈರ್ಯಸ್ಥೆ ಹುಡುಗಿ.

ಕ್ಷಣಕಾಲ ಏಕಾಂಬರ ನಿರಾಶನಾದ ಈ ಹುಡುಗಿ, ತಾನು ನೆನೆಸಿದ್ದ ಹಾಗೆ ಸರಸ್ವತೀ ಆರಾಧಕಳಾಗಿರದೆ, ಕೇವಲ ಲಕ್ಷ್ಮಿ ಆರಾಧಕಳಾಗಿರಬಹುದೇ ಅಂತ ಸಂಶಯಪಟ್ಟ. ಆದರೆ ನಿಜದ ವಿಷಯ ಅಂದರೆ, ಏಕಾಂಬರನ ಆಸ್ತಿಯೆಲ್ಲಾ ಅವನ ಕವನಗಳ ಕಡತ ಮಾತ್ರ!

"ಬೇರೇನು ಬೇಕು? ನಾನು ಕವಿ. ನೀನು ನನ್ನ ಕಾವ್ಯದೇವಿ. ನಿನ್ನ ಹೆಸರೇನೇ ಇರಲಿ ನಾನು ನಿನ್ನನ್ನು ಕವಿತಾ ಅಂತಲೇ ಕರೆಯುತ್ತೇನೆ. ಸಾಲದೆ?"

"ಸಾಲದು ಮಿಸ್ಟರ್. ಮೋಹನನಿಗೆ ಹೋಲಿಸಿದರೆ ಏನೇನೂ ಸಾಲದು."

"ಯಾವ ಮೋಹನ?" ಏಕಾಂಬರ ಹಲ್ಲುಗಳ ಮಧ್ಯದಿಂದ ಕೇಳಿದ

"ನನ್ನ ಭಾವೀ ಪತಿ. ಈಗ ಅಮೇರಿದಲ್ಲಿದ್ದಾನೆ D.Sc. ಗೆ ಓದುತ್ತಿದ್ದಾನೆ ಮೋಹನನ ತಂದೆ ಐದು ಚಿತ್ರ ಮಂದಿರಗಳ ಮಾಲೀಕರು."

"ಇರಲಿ ಕವಿತಾ; ಅದೃಷ್ಟವಿದ್ದರೆ ನಾನು ಹನ್ನೆರಡು ಚಿತ್ರಮಂದಿರಗಳನ್ನು ಕೊಳ್ಳಬಲ್ಲೆ. ನಿನ್ನ ತಂದೆಯ ಹತ್ತಿರವೇ ಹೋಗಿ ನೇರವಾಗಿ ಮಾತನಾಡುತ್ತೇನೆ. ಯಾರು ನಿನ್ನ ತಂದೆ? ಎಲ್ಲಿದ್ದಾರೆ ಹೇಳು!"

" ಧಾರಾಳವಾಗಿ ಮಿಸ್ಟರ್. ನನ್ನ ತಂದೆ ಚಕ್ರಪಾಣಿರಾವ್. L. I. C. ಏಜೆಂಟ್, ಅರುಣಾಚಲ ಮೊದಲಿ ಬೀದಿ. ಧಾರಾಳವಾಗಿ ಹೋಗಿ ಮಾತನಾಡಿ ಮಿಸ್ಟರ್. ಕಮಾನ್ ಕ್ರಿಸ್ಟೀನ್ ಕೀಲರ್!" ಅನ್ನುತ್ತಾ ತನ್ನ ಜೂಲು ನಾಯಿ ಮರಿಯನ್ನು ಅಟ್ಟಿಕೊಂಡು ಫೌಂಟೆನ್ ಕಡೆ ನಡೆದಳು

ಏಕಾಂಬರ ಮರುದಿನವೇ ಅರುಣಾಚಲ ಮೊದಲಿ ಬೀದಿಯಲ್ಲಿ, L. I. C. ಏಜೆಂಟ್ ಚಕ್ರಪಾಣಿರಾವ್ ಅವರನ್ನು ಭೇಟಿ ಮಾಡಿದ. ಚಕ್ರಪಾಣಿರಾಯರು ಏಕಾಂಬರನನ್ನು ಬಹಳ ಆದರದಿಂದ ಸ್ವಾಗತಿಸಿ, ತಮ್ಮ ಕೋಣೆಯಲ್ಲಿ ಕೂಡ್ರಿಸಿದರು. ಒಂದು ಕಾಗದ ಪೆನ್ನು ಹಿಡಿದುಕೊಂಡರು.

" ನಿಮ್ಮ ಹೆಸರು ?"

" ಏಕಾಂಬರನಾಥ್."

ಚಕ್ರಪಾಣಿರಾಯರು ಬರೆದುಕೊಂಡರು.

" ನಿಮ್ಮ ತಂದೆಯ ಹೆಸರು ?"

" ಉಮಾಪತಿರಾವ್ "

ಚಕ್ರಪಾಣಿರಾಯರು ಬರೆದುಕೊಂಡರು.

" ನಿಮ್ಮ ವಯಸ್ಸು ?"

"ಇಪ್ಪತ್ತು."

ಇದನ್ನೂ ಬರೆದುಕೊಂಡರು-

" ಕೆಲಸ ?"

" ಕವಿ !" ಏಕಾಂಬರ ಹೆಮ್ಮೆಯಿಂದ ಹೇಳಿದ.

ಚಕ್ರಪಾಣಿರಾಯರು ಪೆನ್ನಾ ಕೆಳಗಿಟ್ಟರು.

" ಹಾಗಿದ್ದರೆ ನೀವು ಎಷ್ಟಕ್ಕೆ ಇನ್‌ಷೂರ್ ಮಾಡಬಲ್ಲಿರಿ ?
ಪ್ರಿಮಿಯಂ ಹಣ ಹೇಗೆ ಕಟ್ಟಬಲ್ಲಿರಿ ?"

ಏಕಾಂಬರ ಸುಸ್ತಾದ.

"ನನಗೆ—ಇನ್ಷ್ಯೂರೆನ್ಸ್ ಬೇಕಿಲ್ಲವಲ್ಲ !" ಅಂದ.

"ಮತ್ತೆ—ಈ ಭೇಟಿಗೆ ಕಾರಣವೇನು ?"

"ನಿಮ್ಮ ಮಗಳು ಕವಿತಾಳನ್ನು ನಾನು ವರಿಸಿದ್ದೇನೆ. ನಮ್ಮ ಲಗ್ನಕ್ಕೆ ನಿಮ್ಮ ಒಪ್ಪಿಗೆ ಕೇಳಲು ಬಂದಿದ್ದೇನೆ."

"ನನಗೆ ಕವಿತಾ ಎಂಬ ಹೆಸರಿನ ಮಗಳಿಲ್ಲವಲ್ಲ !"

"ಕವಿತಾ—ನಾನಿಟ್ಟ ಹೆಸರು. ಆ ಜೂಲು ನಾಯಿಮರಿಯ ಜೊತೆ ಓಡಾ ಡುವ ಆ ನನ್ನ ಕಾವ್ಯದೇವಿ ..."

"ಸರಿ. ಸರೋಜಾ!" ಅಂತ ಡಂಗುರ ಹಾಕಿದರು ಚಕ್ರಪಾಣಿ.

ಏಕಾಂಬರನ ಕವಿತಾ ಪ್ರತ್ಯಕ್ಷಳಾದಳು.

"ಸರೋಜಾ—ಈ—ಈ—ಈತ ನಿನಗೆ ಗೊತ್ತೇನಮ್ಮ!"

"ಇಲ್ಲ ಅಪ್ಪಾ."

"ಈತ ಏಕಾಂಬರನಾಥ್. ಕವಿ. ನಿನ್ನನ್ನು ವರಿಸಿ—ಲಗ್ನವಾಗಲು ನನ್ನ ಅನುಮತಿ ಕೇಳಲು ಬಂದಿದ್ದಾರೆ. ಆದರೂ ನಿನಗೆ ಪರಿಚಯವಿಲ್ಲವೆ?"

"ಇಲ್ಲ ಅಪ್ಪಾ."

"ಸರಿ. ಹೋಗು ಒಳಗೆ."

ಸರೋಜ ಒಳಗೆ ಹೋದಳು.

"ನೋಡಿ ಏಕಾಂಬರನಾಥ್. ಈಗ ಕನಿಷ್ಠಪಕ್ಷ 10,000ಕ್ಕೆ ಇನ್ಷೂರ್ ಮಾಡಿ, ಮೊದಲನೇ ಪ್ರೀಮಿಯಂ ನಾನೂರು ಐವತ್ತು ರೂಪಾಯಿ ಸುಮಾರು ಕಟ್ಟಬಲ್ಲಿರೇನು?"

"ಖಂಡಿತ ಇಲ್ಲ ಸರ್." ಅಂದ ಏಕಾಂಬರ ಬೆವರುತ್ತಾ.

"ಸರಿ. ಯಾರಲ್ಲಿ!?"

ಚಪ್ರಾಸಿ ಬಂದ.

"ಇವರನ್ನು ಹೊರಕ್ಕೆ ಬಿಸಾಡು!" ಚಕ್ರಪಾಣಿ ಆಜ್ಞೆ ಇತ್ತರು.

ಮರುಕ್ಷಣವೇ, ಏಕಾಂಬರ ಅರುಣಾಚಲ ಮೊದಲಿ ಬೀದಿಯಲ್ಲಿ ಮೈ ತಡವಿ ಕೊಂಡು ಎದ್ದ. ನರಕಸ್ತನಾದ ಮೊಹಮದ್ ಬಿನ್ ತೊಗಲಕ್‌ನು ಹಿಂದೆ ದೇವ ಗಿರಿಯಿಂದ ದೆಹಲಿಗೆ ವಾಪಸಾದ ರೀತಿಯಲ್ಲಿ, ಏಕಾಂಬರ ಮನೆ ಸೇರಿದ.

ಇದಾದ ಕೆಲವು ದಿನಗಳ ವರಿವಿಗೆ ಏಕಾಂಬರ ತನ್ನ ಮೈ ಕೈ ಕಾಲುಗಳ ನೋವಿಗೆ ಚಿಕಿತ್ಸೆ ನಡೆಸಿದ. ನನ್ನ ತಮ್ಮ ಚಿದಂಬರನಿಂದ "ವಾತ-ಗೋ" ಗುಳಿಗೆ ಗಳನ್ನು ಕೂಡ ಪಡೆದ ಅಂತ ಕೇಳಿದೆ ಆಮೇಲೆ ಪುನಃ ತನ್ನ ಅದೃಷ್ಟ ಪರೀಕ್ಷೆ ಕಾರ್ಯದಲ್ಲಿ ತೊಡಗಿದ. ಒಂದು ದಿನ ಬೆಳಿಗ್ಗೆ ತನ್ನ ಕಾಫಿ ತಿಂಡಿಯೊಂದಿಗೆ ದಿನ ಪತ್ರಿಕೆ ಓದುತ್ತಿದ್ದಾಗ ಒಂದು ಜಾಹಿರಾತು ಅವನ ಕಣ್ಣಿಗೆ ಬಿತ್ತು "ವರ ಬೇಕಾಗಿದೆ. ಒಂದು ದೊಡ್ಡ ಮನೆತನದ, ಐಶ್ವರ್ಯವಂತರ ಮನೆಯ ಪದವೀಧರೆ ಸ್ಫುರದ್ರೂಪಿ ಕನ್ನೆಗೆ ತಕ್ಕ ವರ ಬೇಕಾಗಿದೆ. ಉಚಿತ ವರದಕ್ಷಿಣೆ ಮತ್ತು ವರೋಪಚಾರ, ಮಾಡ ಲಾಗುತ್ತೆ. C/o" ಹೀಗಿತ್ತು.

ಒಂದು ದೊಡ್ಡ ಮನೆತನದ ಐಶ್ವರ್ಯವಂತರ ಮನೆಯು ಪದವೀಧರೆ ಸ್ಫುರದ್ರೂಪಿ ಕನ್ಯೆಗೆ ತಕ್ಕ ವರ ಅಂದರೆ, ತಾನೇ ಅಂತ ಏಕಾಂಬರ ನಿರ್ಧರಿಸಿಕೊಂಡ. ಈಗಿನ ಕಾಲದಲ್ಲಿ ಪ್ರತಿಯೊಬ್ಬ ಐಶ್ವರ್ಯವಂತರ ಮನೆಯಲ್ಲೂ ಒಬ್ಬ ಕವಿ ಅಳಿಯ ಇರಲೇಬೇಕು ಅಂತ ಏಕಾಂಬರನ ವಾದ. ಇಲ್ಲದಿದ್ದಲ್ಲಿ ಕವಿತೆಗಳಿಗೆ ಉಳಬಾಳಿಲ್ಲ ಕವಿಗಳಿಗಂತೂ ಉಳಬಾಳೀ ಇಲ್ಲ. ಸರಿ C/o ವಿಳಾಸದ ಪತ್ತೆಹಚ್ಚಿ, ಆ ವಿಳಾಸದ ಭವನಕ್ಕೆ ಭೇಟಿ ಇತ್ತ.

ಹಿಂದೆ ಅಗಲೇ ಎರಡು ಬಾರಿ ಭೇಟಿ ಇತ್ತು, ಏಕಾಂಬರನಿಗೆ ಭೇಟಿಗಳ ಮರ್ಮ ಒಂದು ತರಹ ರಕ್ತಗತವಾಗಿಬಿಟ್ಟಿತ್ತು. ಆದ್ದರಿಂದ ಮನೆಯ ಯಜಮಾನನೆದುರು ಹೋಗಿ ನಿಲ್ಲುವುದು ಅವನಿಗೆ ಕಷ್ಟವಾಗಲಿಲ್ಲ. ಅದೃಷ್ಟವೆಂದರೆ ಈ ಮೂರನೆಯ ಭೇಟಿ ಬಹಳ ಹೊತ್ತು ತೆಗೆದುಕೊಳ್ಳಲಿಲ್ಲ ಕೇವಲ ಎರಡೇ ನಿಮಿಷಗಳಲ್ಲಿ ಆ ದೊಡ್ಡ ಮನೆತನದ ಐಶ್ವರ್ಯವಂತ ಆಸಾಮಿ ವಿಷಯವನ್ನೆಲ್ಲಾ ಗ್ರಹಿಸಿ ಚಪ್ರಾಸಿಯನ್ನು ಕರೆದರು ಏಕಾಂಬರ ಆಮೇಲೆ ಹೇಳಿದ ಆ ಆಸಾಮಿ ಥೇಟ್ ಅಯೂಬ್ ಖಾನ್ ಇದ್ದ ಹಾಗಿದ್ದನಂತೆ!

"ಚಪ್ರಾಸಿ, ಇವನನ್ನು ಹೊರಕ್ಕೆ ಬಿಸಾಡು!" ಅಂತ ಅಜ್ಞೆ ಇತ್ತರು.

ಏಕಾಂಬರ, ಆ ದೊಡ್ಡ ಮನೆತನದ ಐಶ್ವರ್ಯವಂತರ ಭವನದ ಗೇಟಿನಿಂದಾಚೆ ಮೈ ಕೊಡವಿಕೊಳ್ಳುತ್ತ ಏಳುತ್ತಿದ್ದಾಗಲೇ, ಅವನಿಗೆ ತನ್ನ ಹಿಂದೆ ಒಬ್ಬ ವ್ಯಕ್ತಿ ನಿಂತಿದ್ದುದು ಅರಿವಾಗಿದ್ದು.

"ತಮ್ಮಾ ಏಳು. ಎದ್ದೇಳು. ಹೆದರಬೇಡ." ಅಂದ ಆತ.

ಏಕಾಂಬರ ಎದ್ದು ಕುಳಿತು ಆಶ್ಚರ್ಯದಿಂದ ಹಾಗೇ ಆ ವ್ಯಕ್ತಿಯನ್ನು ನೋಡಿದ. ಸುಮಾರು 50–55 ವಯಸ್ಸಿನ ಯುವಕ. ಕಪ್ಪೂ ಅಲ್ಲದ ಬಿಳುಪೂ ಅಲ್ಲದ ಹುರಿಮೀಸೆ. ಡಿಟ್ಟೋ ವರ್ಣದ ಸಕೇಶ ತಲೆ. ಬಿಳಿ ಜುಬ್ಬ, ಕಚ್ಚೆಪಂಚೆ, ಎಕ್ಕಡ, ಜುಬ್ಬದ ಮೇಲೆ ಒಂದು ಗೆರೆ ಜರತಾರಿ ಅಂಚಿನ ವಲ್ಲಿ. ಕೈಯ್ಯಲ್ಲಿ ಒಂದು ಚಲಕಾಷ್ಟ. ಬೇರೇನೂ ಮಾರ್ಪಾಡಿಲ್ಲದೆ 'ದೇವದಾಸಿ' ನಾಟಕದಲ್ಲಿ ವಸಂತಶೇಖರನಾಗಿ, ರಂಗಸ್ಥಳಕ್ಕೆ ಪ್ರವೇಶಮಾಡಬಹುದಾಗಿದ್ದ ರೂಪ.

"ಯಾರು ನೀವು?" ಏಕಾಂಬರ ಕೇಳಿದ.

"ತಮ್ಮಾ ನಾನ್ಯಾರಾದರೇನು? ಹೇಳು—ನೀನೆಂದಾದರೂ ನಾಟಕದಲ್ಲಿ ಅಭಿನಯಿಸಿದ್ದೀಯಾ?"

"ಇಲ್ಲ"

"ಸರಿ. ಇದೂ ಒಂದು ಅದೃಷ್ಟವೇ ಸರಿ. ಹೇಳು ತಮ್ಮಾ—ಚಲನ ಚಿತ್ರದಲ್ಲಿ ಅಭಿನಯಿಸುವ ಇಚ್ಛೆ ಉಂಟೇ ನಿನಗೆ?"

ಏಕಾಂಬರನಿಗೆ ಇದನ್ನು ಕೇಳಿ, ತಾನು ಇನ್ನೂ ಜೀವಂತನಾಗಿದ್ದೇನೋ ಅಥವಾ ಬಿದ್ದ ಪೆಟ್ಟಿಗೆ ಪ್ರಾಣಪಕ್ಷಿ ಹಾರಿಹೋಗಿ, ಬೇರೆ ಲೋಕದಲ್ಲಿ ಈ ಅನುಭವ ಪಡೀತಿದ್ದೇನೋ ಅಂತ ಸಂಶಯವಾಯ್ತಂತೆ! ಒಂದು ಬಾರಿ ಕೆಮ್ಮಿದ. ಒಂದು ಬಾರಿ ತನ್ನ ಮೈಯ್ಯನ್ನೆಲ್ಲಾ ಮುಟ್ಟಿ ನೋಡಿಕೊಂಡ ಒಂದು ಬಾರಿ ತನ್ನ ನಾಲಿಗೆಯನ್ನು ಉದ್ದ ಚಾಚಿ ನೋಡಿಕೊಂಡ ಒಂದು ಬಾರಿ ತಾನೇ ಚಿವುಟಿಕೊಂಡ. ನೋವಾಯ್ತು. ಎಲ್ಲಾ ಪರೀಕ್ಷೆಯಿಂದಲೂ ತಾನು ಜೀವಂತವಿರುವೆನೆಂದು ನಿರ್ಧರಿಸಿಕೊಂಡ

"ತಮ್ಮಾ ಆಶ್ಚರ್ಯಪಡಬೇಡ. ಈಗ ಕೆಲವು ದಿನಗಳ ಹಿಂದೆ ಅಕಸ್ಮಾತ್ತಾಗಿ ವೆಂಕಟೇಶ್ವರಾಜ ಕಾವ್ಯಮಂದಿರ'ದೆದುರಿನಲ್ಲಿ ನೀನು ಮೈ ಕೊಡವಿಕೊಂಡು ಏಳುತ್ತಿದ್ದುದನ್ನು ನೋಡಿದೆ. ಆ ಮೇಲೆ ಪುನಃ ಚಕ್ರಪಾಣಿರಾಯರ ಬಂಗಲೆ ಹೊರಗೆ ನೀನು ಮೈ ಕೊಡವಿಕೊಂಡು ಏಳುತ್ತಿದ್ದುದನ್ನು ನೋಡಿದೆ. ಇಗೋ ಇಲ್ಲಿ ಪುನಃ ಇಂದು ನೀನು ಮೈ ಕೊಡವಿಕೊಂಡು ಏಳುತ್ತಿದ್ದುದನ್ನು ನೋಡಿದೆ ನಿನಗೆ ಇದೊಂದು ಕಲೆಯಾಗಿಬಿಟ್ಟಿದೆ. ಈಗ ಎರಡು ತಿಂಗಳಿಂದ ನನ್ನ ಕಥಾನಾಯಕನಿಗೆ ಇದೇ ಪಟ್ಟನ್ನು ಅಭ್ಯಾಸ ಮಾಡಿಸಿ ಮಾಡಿಸಿ ಸುಸ್ತಾಗಿದ್ದೇನೆ ನಿನ್ನ ಮುಂದೆ ಅವನು ಹಸುಗೂಸು. ಹೇಳು ತಮ್ಮ ನನ್ನ ಜೊತೆ ಬರ್ತೀಯಾ? ನಿನ್ನ ಭವಿಷ್ಯ ಉಗ್ರವಾಗುತ್ತೆ!"

" ನಿಜವಾಗಲೂ....ನಿಜ್ವೆ ? " ಏಕಾಂಬರ ತೊದಲಿದ.

"ನನ್ನನ್ನು ನಂಬು ತಮ್ಮಾ. ತಗೋ ಈಗಲೇ ಬೇಕಾದರೆ ಈ ನಕ್ಷತ್ರ ಚುಕ್ಕೆ ಇರುವ ಕಡೆ ಸಹಿ ಹಾಕು." ಅನ್ನುತ್ತಾ ತನ್ನ ಕಿಸೆ ಇಂದ ಒಂದು ಕಾಗದ ತೆಗೆದ ಆತ.

" ನೀವ್ಯಾರು ಹೇಳಿ. "

" ನಾನು H. M. D· K. ಹಂಸರಾಜ್, 'ವಿರಹಪ್ರಲಾಪದ' ಕಥೆ ಸಂಭಾಷಣೆ, ಗೀತೆ, ಮತ್ತು ನೃತ್ಯಗಳ ಕರ್ತ. ಹಾಗೂ ಡೈರೆಕ್ಟರು. ನನ್ನ ಚಿತ್ರಕ್ಕೆ ಹೊಸ ಮುಖಗಳನ್ನು ಹುಡುಕುತ್ತಿದ್ದೇನೆ. ನಿನ್ನ ಹೆಸರೇನು ತಮ್ಮಾ? "

" ಏಕಾಂಬರ ನಾಥ್. "

" ಏಕಾಂಬರನಾಥ್? ಚಿತ್ರ ಪ್ರಪಂಚಕ್ಕೆ ಆ ಹೆಸರು ಸುತರಾಂ ಸರಿಹೋಗೊಲ್ಲ ಏನಾದರೂ " ಕುಮಾರ್ " ಅಂತ ಬಂದರೆ ವಾಸಿ. ನಿಮ್ಮ ತಂದೆ ಹೆಸರೇನು ಹೇಳು?"

" ಉಮಾಪತಿ ರಾಯರು "

" ಸರಿ ಇನ್ನು ಮೇಲೆ ನೀನು ಉಜ್ವಲ ಕುಮಾರ್! ಒಪ್ಪಿಗೆ ಉಂಟೋ ಇಲ್ಲವೋ ?"

ಉಮಾಪತಿ ಕುಮಾರನಿಗೆ ಉಜ್ವಲ ಕುಮಾರನೆಂದು ನಾಮಕರಣ ಮಾಡಿದುದರ ಅಂತರಾರ್ಥ, ಏಕಾಂಬರನಿಗೆ ಗೋಚರವಾಗದಿದ್ದರೂ, ಒಪ್ಪಿಗೆ ಇತ್ತ. ಏಕೆಂದರೆ

ತಾನು ರಜತ ಪರದೆಯ ಮೇಲೆ ಕಾಣಿಸಿಕೊಂಡಾಗ, ಬಾಯ್ಬಿಟ್ಟುಕೊಂಡು ತನ್ನನ್ನು ನೋಡುತ್ತ ಚಿತ್ರ ಮಂದಿರದಲ್ಲಿ ಕುಳಿತಿರುವ, ಸರ್ವೋತ್ತಮರಾಯ, ಕವಿತಾ. ಮತ್ತು ಆ ದೊಡ್ಡ ಮನೆತನದ ಐಶ್ವರ್ಯವಂತ ಆಸಾಮಿ ಎಂತಹ ಕ್ರಿಮಿಗಳಾಗಿರುತ್ತಾರೆಂದು ಯೋಚಿಸಿ ಕೂಡಲೇ ಒಪ್ಪಿಗೆ ಇತ್ತ.


ಅದೇ ನೋಡಿ ಇಂದು, H. M. D. K. ಹಂಸರಾಜ್ ಅವರು ನಮ್ಮ ಉಜ್ವಲ ಕುಮಾರನನ್ನು ಪತ್ರಿಕಾ ಪ್ರತಿನಿಧಿಗಳಿಗೆ ಪರಿಚಯ ಮಾಡಿಕೊಡಲು ಏರ್ಪಡಿಸಿದ್ದ ಸಂತರ್ಪಣೆ ಮೇಲೆ ನಡೆದದ್ದು. ನಾನೂ ಬಲವಂತಕ್ಕೆ ಕಟ್ಟುಬಿದ್ದು ಹೋಗಲೇಬೇಕಾಯ್ತು.

ಮಲ್ಹಾರಿರಾಯರು ತಮ್ಮ ಮಾತು ಮುಗಿಸಿ ಧೀರ್ಘ ಶ್ವಾಸ ತೆಗೆದುಕೊಂಡರು.

" ಪರಶು ಎಲ್ಲಿ ನಮ್ಮ ಸ್ನೇಹಿತರಿಗೆಲ್ಲಾ, ನನ್ನ ಲೆಕ್ಕದಲ್ಲಿ ಒಂದೊಂದು ಸ್ಟ್ರಾಂಗ್ ಕಾಫಿ ತಾ. ಉಜ್ವಲ ಕುಮಾರನ ವಿಜಯಕ್ಕೆ ಕುಡಿಯೋಣ.... ಹಾ ಪರುಶು ನಿನಗೂ ಒಂದು ಕಾಫಿ ತಂದುಕೋ." ಅಂದರು.

ನಾವೆಲ್ಲರೂ ಧಾರಾಳ ಮನಸ್ಸಿನಿಂದ ಉಜ್ವಲ ಕುಮಾರನ ಉಜ್ವಲ ಭವಿಷ್ಯಕ್ಕಾಗಿ ಜಯವನ್ನು ಘೋಷಿಸಿ ಕಾಫಿ ಕುಡಿದೆವು.

—ಕೇಫ



ದಿಲ್ಲಿ ದೊಡ್ಡಾಫೀಸಿನಲ್ಲಿ

" ಮಗು ಈ ಫೈಲ್‌ಗಳಲ್ಲಿರೋ ಕಾಗದನ ತಿನ್ಬೇಡ, ಕಾಯಿಲೆ ಬರುತ್ತೆ. ಅವು ಚೀನಾದಿಂದ ಬಂದ ವಿಷದ ಕಾಗದಗಳು.

ಕಸಿದುಬಿಡುತ್ತಿದ್ದರಿ ಎಂದ ಚಿಕ್ಕ ಚಲುವಯ್ಯ

ಹೆಬ್ಬಿಗುಬ್ಬಾಲೆಯಲ್ಲಿ ಸಾಹುಕಾರ್ ಚೆಲುವಯ್ಯನವರು ಮಗನಿಗೆ ಬುದ್ಧಿ ಹೇಳುತ್ತಾ ಇದ್ದರು. "ಮಗಾ! ರಾಜಧಾನೀಗೆ ಹೋಗ್ತಾ ಇದಿ. ಯಾವುದೋ ಹೋಟಲಿನಲ್ಲಿ ಇಳಿದುಕೋತಿ. ಅಲ್ಲಿ ಇಲ್ಲಿ ವಿಚಾರಿಸಿ ಫ್ಲೋರ್ ಮಿಲ್ ಮಿಷೀನ್ ಕೊಡುಕೋಬೇಕು. ಹಾಗೇನೇ ಪವರ್ ಸಿಗೋ ಹಾಗೂ ದೊಡ್ಡ ಕಚೇರೀಲಿ ತರದೂದು ಮಾಡಬೇಕು ಇದಕ್ಕೆಲ್ಲಾ ನಗದು ಹಣ ಕೈಲಿ ಇರಿಸಿಕೊಂಡಿರಬೇಕು. ಕೆಟ್ಟ ಪಟ್ಟಣ. ಜನರು ಜಾದು ಮಾಡ್ತಾರೆ. ಹಣಾನ ಹುಷಾರಾಗಿ ಮಡಕ್ಕೋಬೇಕು. ನಾನು ಹೇಳಿದ್ದು ಜ್ಞಾಪ್ತಿ ಇದೆಯಲ್ಲಾ!—ಹಂಗ ಮಾಡು" ಅಂತ ಬುದ್ಧಿವಾದ ಹೇಳಿ, ಹತ್ತು ಸಾವಿರ ರೂಪಾಯಿ ಬೆಲೆ ಬಾಳುವ ಸರಕಾರಿ ಬಾಂಡುಗಳನ್ನು ಅವನ ಕೈಗೆ ಇತ್ತು, ರಾಜಧಾನಿಗೆ ಕಳಿಸಿಕೊಟ್ಟರು.

ಚಿಕ್ಕ ಚೆಲುವಯ್ಯ ರಾಜಧಾನಿಗೆ ಬಂದ. ರೈಲ್ ನಿಲ್ದಾಣದಲ್ಲೇ ಬಾಲ್ಯದ ಸ್ನೇಹಿತ ರಂಗರಾಜು ಸಿಕ್ಕಿದ. ಪ್ರೌಢವಿದ್ಯಾಭ್ಯಾಸ ಮಾಡುತ್ತಾ ರಂಗರಾಜು ತಮ್ಮವರ ಹಾಸ್ಟೆಲಿನಲ್ಲಿ ಬಿಡಾರ ಹೂಡಿದ್ದ. "ಹತ್ತು ಹನ್ನೆರಡು ದಿವಸ ನೀನು ರಾಜಧಾನೀಲಿ ಇರೋದು. ನಮ್ಮ ಹಾಸ್ಟಲಿನಲ್ಲೇ ಇರು" ಅಂತ. ರಂಗರಾಜು ಕೊಠಡಿಯಲ್ಲೇ ಬಿಡಾರ ಹೂಡಿದ.

ಹೋಟಲುಗಳಲ್ಲಿ, ಛತ್ರಗಳಲ್ಲಿ; ಉಳಿದುಕೊಂಡರೆ, ಹತ್ತಿರ ಇರುವ ಹಣವನ್ನು ಹುಷಾರಾಗಿ ಕಾದುಕೊಳ್ಳುವುದೇ ಕಷ್ಟ. ಆದರೆ, ಕಲಿತ ಹುಡುಗರಿರುವ ಹಾಸ್ಟೆಲಿನಲ್ಲಿ ಮಹತ್ವಾಂತ ಕಷ್ಟ ಅನ್ನೋದು ಚಿಕ್ಕಚೆಲುವಯ್ಯನಿಗೆ ತಿಳಿದಿತ್ತು.

ಕಾರಣ ಮೂರನೇ ದಿನ ಬೆಳಿಗ್ಗೇನೆ ಹತ್ತಿರವಿದ್ದ ದೊಡ್ಡ ಬ್ಯಾಂಕಿಗೆ ಹೋದ. "ನೂರು ರೂಪಾಯಿ ಸಾಲ ಬೇಕು" ಎಂದು ಬ್ಯಾಂಕಿನ ಮ್ಯಾನೇಜರ್ ಹತ್ತಿರ ಕೇಳಿದ. "ಬಡ್ಡಿ ಎಷ್ಟರ ದರದಲ್ಲಿ ಕೊಡ್ತೀರಿ" ಎಂದೂ ಕೇಳಿದ. "ಶೇಕಡಾ ಎಂಟರ ಹಾಗೆ ಬಡ್ಡಿ ಹಾಕಿಕೊಂಡು ಸಾಲ ಕೊಡ್ತೀವಿ. ಆದರೆ ಸಾಲಕ್ಕೆ ಯಾವುದಾದರೂ ಗಟ್ಟಿಯಾದ ಆಧಾರ ಬೇಕು" ಎಂದರು ಮ್ಯಾನೇಜರು. "ಹತ್ತು ಸಾವಿರ ರೂಪಾಯಿ ಬೆಲೆಬಾಳುವ ಸರಕಾರಿ ಬಾಂಡುಗಳಿನ್ನು ಒತ್ತೆ ಇಡ್ತೀನಿ. ಬಡ್ಡಿ ಹದಿನೈದು ದಿವಸಗಳಿಗೆ ನೂರು ರೂಪಾಯಿಗೆ ಮೂವತ್ತು ಮೂರು ನಯಾಪೈಸೆ ಆಗುತ್ತೆ ಅಲ್ಲವೆ?" ಎಂದು ಚಿಕ್ಕ ಚೆಲುವಯ್ಯ ಹೇಳಿದ.

"ಹ್ಞಾ, ಆಗಬಹುದು" ಅಂತ ಬ್ಯಾಂಕ್ ಮ್ಯಾನೇಜರು ಅಸ್ತುವಾಚನ ನುಡಿದರು. ನೂರು ರೂಪಾಯಿ ನಗದು ಹಿಡಿದುಕೊಂಡು ಚಿಕ್ಕಚೆಲುವಯ್ಯ ಹೊರಬಿದ್ದ.

ಏಳೆಂಟು ದಿವಸ ಅಲ್ಲಿ ಇಲ್ಲಿ ತಿರದಾಡಿ, "ಫ್ಲೋರ್ ಮಿಲ್" ಮಿಷಿನ್ನಿನ ಅಂದಾಜು ಮಾಡಿ, ಒಂದು ಅಂಗಡಿಯಲ್ಲಿ ವ್ಯಾಪಾರವನ್ನು ಕುದುರಿಸಿದ. "ನಾಳೆ ಹಣ ತಂದು ಕೊಟ್ಟು "ಆರ್ಡರ್" ಮಾಡಗ್ತೀನಿ. ವಾರದೊಳಗೆ ಸಾಮಾನನ್ನೆಲ್ಲಾ ಹೆಬ್ಬಿಗುಬ್ಬಾಲೆಗೆ ಕಳಿಸಿರಬೇಕು. ಹದಿನೈದು ದಿವಸಗಳಲ್ಲಿ ನಮ್ಮ ಮಾನ್ಯ ಸಚಿವರು ಉದ್ಘಾಟನೆ ಮಾಡುವವರಿದ್ದಾರೆ. ಹರಕತ್ ಆಗಬಾರದು" ಎಂದು ನಿಖರವಾಗಿ ಅಂಗಡಿಯವನಿಗೆ ಹೇಳಿದ.

ಪವರ್ ಆಫೀಸಿನ ಕಾರಕೂನನನ್ನು ಹಿಡಿದು ಅವನ ಹಿಂಗೈಗೆ ಬೆಣ್ಣೆ ಸವರಿ ಅವನ ಖಾರ ಕಡಿಮೆ ಮಾಡಿ ಹೆಬ್ಬಿಗುಬ್ಬಾಲೆ ಫ್ಲೋರ್ ಮಿಲ್ ಮತ್ತು ತೋಟದ ಪಂಪಿಗೆ ಪವರ್ ಸರಬರಾಜು ಮಾಡಬೇಕು ಎಂದು ಷರಾ ಹಾಕಿಸಿ ದೊಡ್ಡ ಹುದ್ದೆ ಅಧ್ಯಕ್ಷರ ಹೆಬ್ಬೆರಳು ಗುರ್ತು ಒತ್ತಿಸಿ, ಜಯ್ ಶಂಕರ್ ಅಂತ ದಿಗ್ವಿಜಯ ಪಡೆದು ಹಿಂತಿರುಗಿ ಬಂದ.

ಮಾರನೆ ದಿನ ಬ್ಯಾಂಕಿಗೆ ಹೋದ. ಮ್ಯಾನೇಜರನ್ನು ಕಂಡ "ಒತ್ತೆ ಇಟ್ಟಿದ್ದ ಸರಕಾರಿ ಬಾಂಡುಗಳನ್ನು ಮಾರ್ತೀನಿ. ನಿಮ್ಮ ಸಾಲ ತೀರಿಸ್ತೀನಿ" ಅಂದ. ಹತ್ತು ಸಾವಿರದ ನೂರು ರೂಪಾಯಿಗೆ ಬಾಂಡುಗಳನ್ನು ಮಾರಿದ್ದಾಯಿತು. ಬಡ್ಡಿ ಮೂವತ್ತೈದು ನಯೆಪೈಸೆ ಖರ್ಚು, ರೂಪಾಯಿ; ಇವನ್ನು ನಗದು ತನ್ನ ಜೇಬಿನಿಂದ ತೆಗೆದು ಕೊಟ್ಟ. ಬಂದಾ ಹತ್ತು ಸಾವಿರ ರೂಪಾಯಿಗಳನ್ನು ಕೊಡಿ ಎಂದು ಕೇಳಿದ.

ಬ್ಯಾಂಕ್ ಮ್ಯಾನೇಜರು ಹಾಗೆಯೇ ಮಾಡುತ್ತಾ

"ನಿಮ್ಮನ್ನು ಒಂದು ಪ್ರಶ್ನೆ ಕೇಳಬೇಕೂಂತ. ವೈಯಕ್ತಿಕವಾದದ್ದು ಕೋಪಿಸಿಕೊಳ್ಳದೆ ಇದ್ದರೆ" ಎಂದು ಕೇಳಿದ.

"ಅದಕ್ಕೇನು ಕೇಳಿ" ಎಂದ ಚಿಕ್ಕ ಚೆಲುವಯ್ಯ, ರೂಪಾಯಿ ನೋಟುಗಳನ್ನು ತನ್ನ ಚೀಲದಲ್ಲಿ ಭದ್ರ ಮಾಡುತ್ತಾ.

"ಹತ್ತು ಸಾವಿರ ರೂಪಾಯಿಗಳನ್ನು ಅವತ್ತೇ ನಗದು ಪಡೆಯಬಹುದಾಗಿತ್ತಲ್ಲ, ನೂರು ರೂಪಾಯಿ ಸಾಲ ಮಾಡದೆ ಇರಬಹುದಾಗಿತ್ತಲ್ಲ" ಎಂದರು. ಬ್ಯಾಂಕು ಮ್ಯಾನೇಜರು.

"ಅಪ್ಪ ಹೇಳಿದ ಹಾಗೆ ಮಾಡಿದೆ. ಅಲ್ಲದೆ ಹಾಸ್ಟಲಿನಲ್ಲಿ ಹತ್ತು ಸಾವಿರ ರೂಪಾಯಿ ನಗದನ್ನಾಗಲಿ, ಸರಕಾರದ ಬಾಂಡುಗಳನ್ನಾಗಲಿ ಇಟ್ಟುಕೊಂಡಿರಲು ಸಾಧ್ಯವೇ? ಅವನ್ನು ನಿಮ್ಮ ಬ್ಯಾಂಕಿನಲ್ಲಿ ರಕ್ಷಿಸಿಕೊಂಡಿರಿ ಅಂತ ಕೊಟ್ಟರೆ ದಿನಕ್ಕೆ ಒಂದು ರೂಪಾಯಿ ಸೇಫ್ ಡಿಪಾಜಿಟ್ ವಾಲ್ಟ್ ಫೀಸ್ ಅಂತ ಕಸಿದುಬಿಡ್ತಿದ್ದೀರಿ" ಎಂದ ಚಿಕ್ಕ ಚೆಲುವಯ್ಯ.

ಜರ್ಮನ್ ಶೂರ

ಜರ್ಮನಿಯಿಂದ ಭಾವಮೈದ ಒಂದು ಕಾಗದದಲ್ಲಿ "ಭಾವಯ್ಯ, ಈ ಊರಿನಲ್ಲಿ ನನಗೆ ತುಂಬಾ ಸ್ನೇಹಿತರಾಗಿರುವ ಹೆರ್ ಎಕ್ಸನರ್ ಎನ್ನುವರು ಭಾರತ ಪ್ರವಾಸಕ್ಕೆ ಹೊರಟಿದ್ದಾರೆ. ಬೆಂಗಳೂರಿಗೆ ಇಂಥಾ ದಿವಸ ಬರ್ತಾರೆ. ಎರಡು ದಿನ ಅಲ್ಲಿ ಇರ್ತಾರೆ. ಬೆಂಗಳೂರಿಗೆ ಯಾವ ವಿಮಾನದಲ್ಲಿ ಬರ್ತಾರೆ ಅನ್ನೋದನ್ನ ಅವರೇ ನಿಮಗೆ ಬರೆದು ತಿಳಿಸುತ್ತಾರೆ. ದಯವಿಟ್ಟು ನೀವು ಅವರನ್ನು ನೋಡಿಕೊಳ್ಳಬೇಕು. ಇಲ್ಲಿ, ಅವರ ಮನೆಯಲ್ಲಿ ನನಗೆ ಸಕಲ ಸೌಕರ್ಯಗಳನ್ನೂ ಮಾಡಿಕೊಟ್ಟಿದ್ದಾರೆ. ಅವರಿಗೆ ತುಂಬಾ ಋಣಿ ನಾನು" ಎಂದು ಬರೆದಿದ್ದ.

ಜರ್ಮನಿಯಿಂದ ಹಿಂದಿರುಗಿದಾಗ, ಗಂಟೊಂದೂ ಹಾಕಿಕೊಳ್ಳದೆ ಒಂಟಿಯಾಗಿ ಸುರಕ್ಷಿತವಾಗಿ ಭಾವಮೈದ ಹಿಂತಿರುಗಿದಾಗ, ನಮ್ಮ ಅಣ್ಣನ ಮಗಳನ್ನು ಅವನಿಗೆ ಕಟ್ಟಿಬಿಡೋಣ ಎಂದು ಮನಸ್ಸಿನಲ್ಲೇ ಅಂದುಕೊಂಡಿದ್ದೆ. ಅದಕ್ಕೇ ಭಾವಮೈದ ಆದರೂ ಅವನಿಗೆ ನಾನೇ ಬೆಣ್ಣೆ ಹಚ್ಚುತ್ತಿದ್ದೆ. ಯಾರಿಗೂ ಈ ವಿಷಯ ಹೇಳಿತ್ತಿಲ್ಲ. ಇವಳಿಗಂತೂ ಹೇಳಲೇ ಇಲ್ಲ ಏನೂ ಇಲ್ಲದೆ ಇದ್ದರೇನೇ ಇವಳು ಮೆರೀತಾಳೆ. ನಿನ್ನ ತಮ್ಮನಿಗೆ ನನ್ನ ಅಣ್ಣನ ಮಗಳನ್ನು ಕೊಡಬೇಕು ಅಂತ ಏನಾದರೂ ಸುಳುಕೊಟ್ಟರೆ, ಇವತ್ತಿಂದಲೇ ನನ್ನ ತಲೆ ಮೇಲೆ ಕೂತೇಬಿಡ್ತಾಳೆ. ಈ ಹೆದರಿಕೆಯಿಂದ ಮುಗುಮ್ಮಾಗಿದ್ದೆ. ಆದರೆ ಇತ್ತಿಂದೀಚೆಗೆ ಭಾವಮೈದ ಬರೆದ ಕಾಗದಗಳನ್ನ ಹಾಗೂ ಕಳಿಸಿದ ಫೋಟೋಗಳನ್ನು ನೋಡಿದ ಮೇಲೆ ಎಂತೆಂತಾ ಹುಡುಗೀರ ಜತೇಲಿ ಎಲ್ಲೆಲ್ಲೋ ನಿಂತುಕೊಂಡು ತೆಗೆಸಿದ್ದ ಫೋಟೋಗಳನ್ನು ನೋಡಿದ ಮೇಲೆ, ಇವ ಸುರಕ್ಷಿತವಾಗಿ ಬ್ರಹ್ಮಚಾರಿಯಾಗಿ ಹಿಂತಿರುಗುತ್ತಾನೋ ಇಲ್ಲವೋ, ಅಥವಾ ಬರುವಾಗ ದಂಪತಿ ಸಮೇತನಾಗಿ ಎರಡು ದಿವಸ ಮುಂಚೆಯೇ ಬರುತ್ತಾನೋ ಎಂದು ಅನುಮಾನ ಬಂತು.

ಹಾಗಾಗಿ ಅವನ ಸ್ನೇಹಿತ ಒಬ್ಬ ಜರ್ಮನಿಯಿಂದ ಬರ್ತ್ತಾನೆ ಅಂತ ತಿಳಿದಾಗ ಆ ಸ್ನೇಹಿತನ ಹಿಂದೂ ಮುಂದೂ ಒದ್ದಾಡಿ, ಅವನನ್ನ ಶಾಮೀಲು ಮಾಡಿಕೊಂಡು "ಅಯ್ಯಾ! ಭಾವಮೈದನ ಸ್ನೇಹಿತ! ನಿನ್ನಿಂದ ಒಂದು ಮಹದೋಪಕಾರ ಆಗಬೇಕಯ್ಯಾ. ನನ್ನ ಭಾವಮೈದುನನ್ನ ಸ್ವಲ್ಪ ಎಚ್ಚರದಿಂದ ನೋಡಿಕೋಪ್ಪಾ. ಒಂಟಿಯಾಗಿ ಅವನು ನಮ್ಮೂರಿಗೆ ಹಿಂತಿರುಗುವಂತೆ ಸಹಾಯ ಮಾಡಪ್ಪಾ.

ಪ್ರಾಯದ ವಯಸ್ಸು ಅವನಿಗೆ ಬೆರಳು ತೋರಿಸಿದರೆ, ಹಸ್ತ ನುಂಗುವ ಜಾಯಮಾನ ಎಲ್ಲಾ ಅವರ ಅಕ್ಕನ ಹಾಗೆಯೇ ಆದ್ದರಿಂದ ನಿನ್ನ ಸಹಾಯ ಕೋರುತ್ತೀನಪ್ಪಾ” ಎಂದು ಹೇಳಿಬಿಡೋಣ ಅಂದುಕೊಂಡೆ.

ಜರ್ಮನಿ ಸ್ನೇಹಿತನ ತಾರು ಬಂತು. “ಸೋಮವಾರ ಸಂಜೆ ಮುಂದೆ ಮದ್ರಾಸಿನಿಂದ ಬೆಂಗಳೂರಿಗೆ ಬರ್ತೀನಿ. ಇಂಥಾ ಹೋಟಲಿನಲ್ಲಿ ಎರಡು ದಿನ ಇಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದೀನಿ. ಅಲ್ಲಿರುವಾಗ ನಿಮ್ಮ ಭೇಟಿಯಾಗಲು ಪ್ರಯತ್ನಿಸುತ್ತೇನೆ” ಎಂದು. ಎರಡು ದಿವಸ ರಜಾಕ್ಕೆ ಬರೆದು ಹಾಕಿ ವಿಮಾನ ನಿಲ್ದಾಣದಲ್ಲೇ ಅವನನ್ನು ಸ್ವಾಗತಿಸಿದೆ. ಭಾವಮೈದ ಕಳಿಸಿದ ಫೋಟೋದಲ್ಲಿದ್ದ ಹಾಗೇ ಇದ್ದ. ಕೈ ಕೈ ಕುಲುಕಿದೆ. ಅವನೂ ಬಾಚಿ ತಬ್ಬಿಕೊಂಡ “ನಿಮ್ಮ ಭಾವಮೈದ ಎಂಥ ಜಾಣ, ಎಷ್ಟು ಒಳ್ಳೆಯವ, ಎಂತಹ ವಾಚಾಳಿ, ನನ್ನ ಮೇರಿ ಅನಕ ಅವನನ್ನು ಬಿಟ್ಟಿರುವುದೇ ಇಲ್ಲ.” ಎಂದು ಕ್ಷೇಮ ಸಮಾಚಾರ ಹೇಳಿದ. ನನಗೆ ಮೊದಲೇ ಇದ್ದ ಅನುಮಾನ ಇನ್ನೂ ಬಲವಾಯಿತು. ಕೇಳೇ ಬಿಡೋಣವೇ ಮೇರಿಗೆ ಮದುವೆ ಆಗಿದೆಯೇ ಅಂತ ಅನ್ನಿಸಿತು. ಆದರೂ ಹೊಸ ಪರಿಚಯ ಹಾಗೆಲ್ಲಾ ಕೇಳೋದು ಸಭ್ಯ ನಡವಳಿಕೆಯಲ್ಲ, ಅಂತ ಅಂದುಕೊಂಡೆ.

ನನ್ನ ಕಾರಿನಲ್ಲೇ ಅವನನ್ನು ಕರೆದುಕೊಂಡು ಹೋಗಿ ಅವನ ಹೋಟಲಿನಲ್ಲಿ ಇಳಿಸಿದೆ. ಒಂದು ಹೊತ್ತು ನಮ್ಮ ಮನೆಯಲ್ಲಿ ಖಂಡಿತ ಊಟ ಮಾಡಬೇಕು ಅಂತ ಆಗ್ರಹದ ವಿನಂತಿ ಮಾಡಿದೆ. ಎರಡು ದಿವಸ ರಜಾ ತೆಗೆದುಕೊಂಡಿದ್ದೇನೆ. ನಿಮ್ಮನ್ನೆಲ್ಲಿಗೆ ಬೇಕಾದರೂ ಕರೆದುಕೊಂಡು ಹೋಗ್ತೀನಿ. ಏನು ಅನುಕೂಲ ಬೇಕೋ ಮಾಡಿ ಕೊಡ್ತೇನೆ ಅಂದೆ.

“ನಿಮ್ಮೂರಿನ ಕೋಟಿ ಆಂಜನೇಯನ ದೇವಸ್ಥಾನ ನೋಡಬೇಕು. ಅಲ್ಲಿ ಒಂದು ಸೇವೆ ಮಾಡಿಸಬೇಕು. ನಿಮ್ಮ ಭಾವಮೈದ ಬಹಳ ಹೇಳಿದ್ದ ಆ ದೇವಸ್ಥಾನದ ವಿಚಾರ ಅದೊಂದೇ ಬೆಂಗಳೂರಿನಲ್ಲಿ ನನ್ನ ಕೆಲಸ. ನಿಮ್ಮ ಮನೇಲಿ ಬಂದು ಊಟ ಖಂಡಿತ ಮಾಡ್ತೀನಿ. ಆದರೆ ಆ ಊಟ ನೀವು ದಿನಾಗಲೂ ಮಾಡೋ ಊಟ ಆಗಬೇಕು. ನನಗೋಸ್ಕರ ಅಂತ ಬೇರೆ ಅಡಿಗೆ ಮಾಡಿಸಕೂಡದು.” ಎಂದ.

ನನಗೆ ಅನುಮಾನ ಹೆಚ್ಚಾಯಿತು ಕೋಟಿ ಆಂಜನೇಯನ ಗುಡಿಗೆ ಈ ಜರ್ಮನ ಬಂದು ತುಪ್ಪಾಳೆ ಹಣ್ಣಿ ಕೈಂಕರ್ಯ ಮಾಡಿಸಬೇಕಾದರೆ, ನನ್ನ ಭಾವಮೈದ ಹೇಳಿರಬೇಕು ಕೋಟಿ ಆಂಜನೇಯನ ಪರಮ ಭಕ್ತ ಅವ. ಮೇರೀನ ಮದುವೆ ಮಾಡಿಕೊಂಡಿರಬೇಕು. ಅದಕ್ಕೇ ಈಗ ಇವನ ಕೈಲಿ ಕೈಂಕರ್ಯ ಮಾಡಿಸ್ತಿದಾನೆ ಅನ್ನಿಸಿತು. ಆದರೂ ಕೊನೆತನಕ ಸುಮ್ಮನಿದ್ದು ಅವನು ಊರಿಗೆ ಹೊರಡೋವಾಗ ಕೇಳಿಯೇಬಿಡೋಣ ಎಂದುಕೊಂಡೆ.

ಮೂರನೆ ದಿನ ಅವನಿದ್ದ ಹೋಟಲಿಗೆ ಹೋದೆ. ದಿಟ ಹೇಳಿದರೂ ನಂಬ್ತೀರಿ, ಸುಳ್ಳು ಹೇಳಿದರೂ ನಂಬ್ತೀರಿ. ಪಂಚೆ ಉಟ್ಟುಕೊಂಡು, ಧೋತ್ರ ಹೊದ್ದುಕೊಂಡು,

ಹಣೆಗೆ ಕುಂಕುಮ ಇಟ್ಟುಕೊಂಡು ಸಿದ್ಧನಾಗಿದ್ದ, ಈ ಜರ್ಮನ. ಒಂದು ಬುಟ್ಟಿಯಲ್ಲಿ ಹೂವು ಹಣ್ಣು ಕಾಯಿಗಳನ್ನು ಅಣಿಮಾಡಿಕೊಂಡಿದ್ದ. ಇದನ್ನೆಲ್ಲಾ ಕಂಡು ನನ್ನ ಕಣ್ಣುಗಳು ಕಳಚಿಕೊಂಡು ಬೀಳೋ ಹಾಗೆ ಆದುವು. ಜರ್ಮನ ಸ್ನೇಹಿತ ಇದನ್ನು ಕಂಡು, "ಹೋಟಲ್ ಮ್ಯಾನೇಜರಿಗೆ ಹೇಳಿದೆ, ಇವತ್ತು ಬೆಳಿಗ್ಗೆ." ಹೀಗೆ ಆಂಜನೇಯನ ಗುಡೀಗೆ ಹೋಗಬೇಕು. ಅದಕ್ಕೋಸ್ಕರ ಬೆಳಗಿನ ಫಲಾಹಾರ ಬೇಡ. ಹೂವು ಹಣ್ಣು ಕಾಯಿ ತರಿಸಿಕೊಡಿ ಅಂತ. ಅವನೂ ಆಂಜನೇಯನ ಭಕ್ತನಂತೆ. ಎಲ್ಲವನ್ನೂ ಸಿದ್ಧಪಡಿಸಿಕೊಟ್ಟ, ಎಂದು ವಿಚಾರ ತಿಳಿಸಿದ.

ದೇವಸ್ಥಾನಕ್ಕೆ ಹೋದೆವು ಪೂಜೆ ಮಾಡಿಸಿದೆವು. ಆಂಜನೇಯನ ವಿಗ್ರಹವನ್ನು ಕಂಡು ನಮ್ಮ ಜರ್ಮನ ಸ್ನೇಹಿತ ಬೆಬ್ಬರಗಾದನೋ, ಅಥವಾ ಇವನ ಮೋರೆ ನೋಡಿ ಆಂಜನೇಯ ಬೆಬ್ಬರಗಾದನೋ, ಭಗವಂತನೇ ಬಲ್ಲ. ಇಬ್ಬರ ಮುಖದಲ್ಲೂ ಯಾವ ಭಾವೋದ್ರೇಕವೂ ಕಾಣಿಸಲಿಲ್ಲ.

ಪೂಜೆ ಮುಗಿಸಿಕೊಂಡು ಆತನ ಹೋಟಲಿಗೆ ಹಿಂತಿರುಗಿದೆವು. ಸಂಜೆ ಮುಂದೆ ಊರು ಸುತ್ತಿಕೊಂಡು ನಮ್ಮನೆಗೆ ಊಟಕ್ಕೆ ಬರೋದು ಅಂತ ತೀರ್ಮಾನಿಸಿದೆವು ಸಂಜೆ ಭಾವಮೈದ ಓದಿದ ಕಾಲೇಜು ನೋಡಿದ, ಲಾಲ್‌ಬಾಗ್ ನೋಡಿದ. ಊರು ನೋಡಿದ್ದು ಸಾಕು ನಿಮ್ಮನೆಗೆ ಹೋಗಿ ಎಲ್ಲರ ಪರಿಚಯ ಮಾಡಿಕೊಳ್ಳೋಣ ಅಂದ. ತುಂಬಾ ಸರಳ ಸ್ವಭಾವದವ. ನೆಂಟನಂತೆ ಆಡುತ್ತಿದ್ದ.

ಮನೆಗೆ ಹೋದೆವು. ನನ್ನ ಹೆಂಡತಿ ಪರಿಚಯ ಮಾಡಿಕೊಂಡ. ನಿಮ್ಮ ತಮ್ಮ ಕಳಿಸಿದ ಉಡುಗೊರೆ ಅಂತ ಒಂದು ಟ್ರಾನ್ಸಿಸ್ಟರ್ ಕೊಟ್ಟ ನನ್ನ ಉಡುಗೊರೆ, ನನ್ನ ಹೊಸ ತಂಗೀಗೆ ಅಂತ ಹೇಳುತ್ತಾ ಎಲೆಕ್ಟ್ರಿಕ್ ಮಿಕ್ಸರ್ ಒಂದನ್ನು ಕೊಟ್ಟ. ಇವಳ ಮುಖವೋ ಅಡ್ಡಗಲ ಬಿರಿದು ಸಂತಸ ಸೂಚಿಸಿತು. ಮಕ್ಕಳ ಜತೇಲಿ ಸ್ವಲ್ಪ ಹೊತ್ತು ಆಡ್ತಾ ಇದ್ದ.

ನೀವು ಹೇಳಿದ ಹಾಗೆ ನಮ್ಮ ವಾಡಿಕೆ ತರಹ ಅಡಿಗೆ ಮಾಡಿದ್ದೇವೆ. ಆದರೆ ನಮ್ಮನೇಲಿ ಸ್ವಲ್ಪ ಖಾರ ತಿನ್ನೋದು ಹೆಚ್ಚು ಸ್ವಲ್ಪ ರುಚಿ ನೋಡಿ. ಸಾಧ್ಯವಾದರೆ ತಿನ್ನಿ. ಇಲ್ಲವಾದರೆ ಬಿಟ್ಟುಬಿಡಿ. ನಿಮ್ಮ ಹೋಟಲಿನಲ್ಲಿ ಒಂದು ಊಟಾನ ಇಟ್ಟಿರಿ ಅಂತ ಮುನ್ಸೂಚನೆ ಕೊಟ್ಟಿದ್ದೇನೆ ಎಂದು ಹುಷಾರು ಹೇಳಿದೆ.

" ಇದೇನು ಹೀಗಂತೀರಿ ! ನಾನು ಯಾರು ಗೊತ್ತೆ ? ಜರ್ಮನ್ ! ಏನು ಬೇಕಾದರೂ ತಿಂದು ಜೀರ್ಣಿಸಿಕೊಳ್ಳುತ್ತೀವಿ. ಉಪವಾಸಾನೂ ಇರ್ತೀವಿ ಬೇಕಾದರೆ ಆಫ್ರಿಕಾದಲ್ಲಿ ಶಿಕಾರೀಗೆ ಹೋದಾಗ ಮೂರು ವಾರ ಬರಿ ಚಕ್ಕಳ ತಿಂದು ಬದುಕಿದ್ದೆ." ಎಂದೆಲ್ಲಾ ತನ್ನ ಶೂರತ್ವವನ್ನು ಕೊಚ್ಚಿಕೊಂಡ.

ಊಟಕ್ಕೆ ಕುಳಿತೆವು. ಸಾರನ್ನ ತಿಂದ ತುಂಬಾ ಚೆನ್ನಾಗಿದೆ ಇದಕ್ಕೆ ಯಾವ ಸೆಂಟು ಹಾಕ್ತೀರಿ. ಇಷ್ಟು ಘಮ ಘಮ ಅಂತ ಇದೆ ಎಂದು ಕೇಳಿದ. ಮಜ್ಜಿಗೆ ಹುಳಿಯನ್ನ ಉಂಡ ಕ್ಯಾರಟ್ ಹಲ್ವ ತಿಂದ ಎರಡು ಸರ್ತಿ ಬಡಿಸಿಕೊಂಡ. ಮೊಸರನ್ನ ಬಡಿಸಿದಾಗ ನಂಚಿಕೊಳ್ಳುಕ್ಕೆ ಅಂತ ಇವಳು ಮಿಡಿ ಮಾವಿನ ಉಪ್ಪಿನ ಕಾಯನ್ನು ಯಥಾಪ್ರಕಾರ ಬಡಿಸಿದಳು.

"ಇದು ಭಯಂಕರ ಖಾರ. ತಿನ್ನದೆ ಇದ್ದರೂ ಚೆನ್ನ" ಎಂದು ಎಚ್ಚರಿಕೆ ಕೊಟ್ಟೆ.

"ನಿಮ್ಮನೆ ಅಡಿಗೆ ಖಾರವೇ ಇಲ್ಲ. ಈಗ ಬಡಿಸಿದ್ದನ್ನೆಲ್ಲಾ ತಿನ್ನಲಿಲ್ಲವೇ ಎಲ್ಲಾ ಹಿತವಾಗಿಯೇ ಇತ್ತು. ಯಾವುದರಲ್ಲೂ ಖಾರ ಹೆಚ್ಚಾಗಿತ್ತಿಲ್ಲವಲ್ಲ!" ಎಂದು ಹೇಳಿ ಮಿಡಿಕಾಯನ್ನು ಕಚ್ಚಿ ಒಂದು ಚೂರನ್ನು ಅಗಿದೇ ಬಿಟ್ಟ. ನುಂಗಿಯೇಬಿಟ್ಟ.

ಅವನದು ಮೊದಲೇ ಕೆಂಚು ಮುಖ. ಈಗ ಇನ್ನೂ ಕೆಂಚೇರಿ ನೀಲವರ್ಣಕ್ಕೆ ತಿರುಗಿತು, ಹಣೆಯಲ್ಲೆಲ್ಲಾ ಕಟ್ಟು ಬೆವರು ಹರಿಯುಕ್ಕೆ ಶುರುವಾಯಿತು. ನಾಯಿ ಬಾಯಿ ಬಿಟ್ಟ ಹಾಗೆ ಬಾಯಿ ತೆರೆದು ನಾಲಿಗೆ ಹೊರಗೆ ಹಾಕಿ, ಹಾ ಹಾ ಹ್ಹಾಕ್ಕೆ ಶುರು ಮಾಡಿದ. ಕಣ್ಣುಗಳು ಕೆರೆಗಳಾದುವು. ಮೂಗು ಕೊಳಾಯಿಯಾಯ್ತು.

ಅವನನ್ನು ನೋಡ್ತಾ ನೋಡ್ತಾ ಪ್ರಾಣಿ ಅಲ್ಲಿಂದ ಬಂದು, ನಮ್ಮೂರಿನಲ್ಲಿ ನಮ್ಮ ಮನೇಲಿ ಪ್ರಾಣ ಬಿಟ್ಟುಬಿಡ್ತಾನಲ್ಲ. ಇವನ ತಿಥೀನ ನಾವು ಮಾಡಬೇಕಾಗು ತ್ತಲ್ಲಪ್ಪಾ ಎಂದು ಹೆದರಿ ಕರಗಿಬಿಟ್ಟೆ. ಮನಸ್ಸು ಮಂಕು ಬಡಿದು ಹೋಯಿತು.

ನನ್ನಾಕೆಯು ಇದನ್ನು ನೋಡಿದಳು ಬೇಗ ಕೆಂಪು ಕಲ್ಲುಸಕ್ಕರೆ ಕೊಬ್ಬರೀನ ತಂದು ಇದನ್ನು ತಿನ್ನು ಅಂತ ಆತನಿಗೆ ಕೊಟ್ಟಳು. ಅವನೇನೂ ತೆಗೆದುಕೊಂಡು ತಿನ್ನೋ ಸ್ಥಿತಿಯಲ್ಲಿತ್ತಿಲ್ಲ. ಈಕೇನೇ ಅತನ ಬಾಯಿಗೆ ಹಾಕಿದಳು. ಒಂದು ಕ್ಷಣದ ಮೇಲೆ ಅಗಿಯುಕ್ಕೆ ಶುರುಮಾಡಿದ ಎರಡು ಮೂರು ಯುಗಗಳಾಗಿರಬಹುದು. ಆಗ ಮನುಷ್ಯರಂತೆ ಉಸಿರಾಡುಕ್ಕೆ ಶುರುಮಾಡಿದ.

"ಇದನ್ನು ಯಾವುದರಿಂದ ತಯಾರಿಸ್ತೀರಿ, ಚೇಳುಗಳಿಂದಲೇ? ಹಾವಿನ ಹಲ್ಲುಗಳಿಂದಲೇ? ಮುಳ್ಳು ಹಂದಿಯಿಂದಲೇ? ಇದರಲ್ಲೇನೋ ಮಾಯಾ ಮಂತ್ರ ಇದೆ. ತಿಂದಾಗ ನಾಲಿಗೆ ಅಂಗಳ ಗಂಟಲು ಎಲ್ಲವನ್ನೂ ಸಾವಿರ ಚೇಳುಗಳು ಕುಟುಕಿದಂತೆ ಆಯಿತು. ಪೆಟ್ರೋಲ್ ಹಾಕಿ ಬೆಂಕಿ ಇಟ್ಟಂತಾಯಿತು. ಬೇಗ ನುಂಗಿ ಬಿಟ್ಟೆ ಹೊಟ್ಟೇಲಿ ಬೆಂದು ಹೋಗುತ್ತೇನೋ ಅಂತ ಆದರೆ ದರಿದ್ರದ್ದು ನುಂಗಿದರೆ ಹೊಟ್ಟೆಗೆ ಹೋಗಲೇ ಇಲ್ಲ ನೆಟ್ಟಗೆ ನೆತ್ತಿಗೆ ಏರಿ ಮಿದುಳನ್ನೇ ಕದಡಿಬಿಡ್ತು. ಜಿಲ್ರೀ! ಆಂಜನೇಯನ ಪ್ರಸಾದವೇ ಇದು! ಅದೇ ತರಹ ಹಾರಿ ಏರುತ್ತಲ್ರೀ!" ಎಂದು ಹಾ, ಹಾ, ಗಳ ಮಧ್ಯೆ ಹೇಳಿದ. ಅಷ್ಟು ಹೊತ್ತಿಗೆ ಸುಧಾರಿಸಿಕೊಂಡ ಹಾಗಿತ್ತು. ಒಂದು ತುತ್ತು ಮೊಸರನ್ನ ತಿಂದ.

" ಈಗ ಅಭ್ಯಾಸ ಆಗಿದೆ ಒಂದು ಸಣ್ಣ ಚೂರು ಮಿಡಿ ತಿನ್ನಲೇ" ಎಂದು ನನ್ನ ಕಡೆ ತಿರುಗಿ ಕೇಳಿದ

" ದಮ್ಮಯ್ಯಾ! ಬೇಡ. ಹೊರ ದೇಶದವರು ಇಲ್ಲಿ ಸತ್ತು ಹೋದರೆ, ದಫನ್ ಮಾಡೋದು ತುಂಬಾ ಕಷ್ಟ. ದಯವಿಟ್ಟು ಬೇಡಿಕೋತೀನಿ. ಬೇಡ ಬೇಡ" ಎಂದೆ.

" ಇಲ್ಲ ಸ್ವಲ್ಪ ನಾಲಿಗೇಗೆ ಮುಟ್ಟಿಸ್ತೀನಿ. ಅಷ್ಟೇ! ಬೇಗ ಮೊಸರನ್ನವನ್ನೂ ತಿನ್ನುತ್ತೀನಿ, ಯಾಕೋ ಒಂದು ತರಹ ರುಚಿ ಅಮರಿಕೊಂಡಿದೆ" ಎಂದ.

ಬೆರಳ ತುದೀಲಿ ಒಂದು ಚೂರು ಮಿಡೀನ ಹಿಡಿದುಕೊಂಡು ಬಾಯಿ ಹತ್ತಿರಕ್ಕೆ ಸಾಗಿಸಿದ.

" ಪ್ರಾಣ ಬಿಟ್ಟೇಬಿಡ್ತಾನೆ ; ಆಮೇಲೆ " ಮೇರಿ " ವಿಚಾರ ತಿಳಿಯೋಹಾಗಿಲ್ಲ." ಅನ್ನಿಸಿತು " ಅಯ್ಯಾ! ತಿನ್ನಲೇಬೇಕಾದರೆ, ಆತ್ಮಹತ್ಯೆ ಮಾಡಿಕೊಂಡೇ ಬಿಡ್ತೀನಿ ಅಂತ ನಿರ್ಧಾರ ಮಾಡಿದ್ದರೆ ; ಮೇರಿ, ಮೇರಿ ಅಂದೆಯೆಲ್ಲಾ ಆಕೆಗೆ ಮದುವೆಯಾಗಿದೆಯೇ? ಮಕ್ಕಳಾಗಿದೆಯೇ ಎಂದು ಕೇಳಿಯೇ ಬಿಟ್ಟೆ.

" ಮೇರಿ! ಮೇರಿಗೆ ಮದುವೆ? ಮೇರಿ ನನ್ನ ಮಗಳು ಎರಡು ವರ್ಷ ಅವಳಿಗೆ ಮದುವೆಯಾಗಿದೆ ಅಂತ ಯಾಕೆ ಕೇಳ್ತೀರಿ? ನಿಮ್ಮಲ್ಲಿ ಬಾಲ್ಯ ವಿವಾಹ ಉಂಟು ಅಂತ ಕೇಳಿದ್ದೆ. ಆದರೆ ಎರಡು ವರ್ಷವಾದಾಗಲೇ ಮದುವೆ ಮಾಡ್ತಾರೆಯೇ? ಎಂದು ಆಶ್ಚರ್ಯ ಸೂಚಿಸುತ್ತಾ, ಬೆರಳನ್ನು ಬಾಯಿಗಿಟ್ಟಕೊಂಡ. ಮೊಸರನ್ನದ ಜತೆಗೆ ಕೂದಲು ಅಲುಗಿಸದೆ ತಿಂದೇ ಬಿಟ್ಟ.

ಊಟ ಆದಮೇಲೆ ಎಲಡಿಕೇನೂ ಹಾಕಿಕೊಂಡ. "ಜರ್ಮನ್ ಎಂದರೆ ಏನೂ ಅಂತ ತಿಳಿದುಕೊಂಡಿದ್ದೀರಿ. ಶೂರರು ಗೊತ್ತೇ?" ಎಂದು ನನಗೆ ಉತ್ಸಾಹದಿಂದ ಗೆಲು ದನಿಯಲ್ಲಿ ಹೇಳಿದ. ಒಪ್ಪಿಕೊಂಡೆ. ಹೋಟಲಿಗೆ ಬಿಟ್ಟು ಬಂದೆ.

ಮಾರನೆ ಬೆಳಿಗ್ಗೆ ಹೋಟಲಿಗೆ ಹೋದೆ "ನಿದ್ರೆ ಬಂತೆ, ಬೆಳಗಿನ ಫಲಾಹಾರ ಆಯಿತೇ? ಎಲ್ಲಾದರೂ ಹೋಗಿ ಬರೋಣವೇ ಎಂದೆ.

ಸುಖವಾಗಿ ನಿದ್ರೆ ಬಂತು. ಪಲಾಹಾರ ಬಲು ಸಪ್ಪೆಯಾಗಿತ್ತು ತಿನ್ನುಕ್ಕೆ ಆಗಲಿಲ್ಲ. ಆ ಮಿಡಿ ಮಾವಿನ ಉಪ್ಪಿನಕಾಯಿ ಎಲ್ಲಿ ಸಿಗುತ್ತೆ, ಆ ಅಂಗಡಿಗೆ ಹೋಗಿ ಸ್ವಲ್ಪ ಕೊಂಡುಕೊಳ್ಳೋಣ" ಎಂದ.

" ಅದು ಮಾರುವ ವಸ್ತುವಲ್ಲ. ರಾಹುಕಾಲದಲ್ಲಿ ಅಮಾವಾಸ್ಯೆ ದಿನ ರಾಕ್ಷಸ ಘಳಿಗೇಲಿ ಮನೇಲಿ ತಯಾರು ಮಾಡೋ ವಸ್ತು. ಒಂದು ಜಾಡೀನ ಬೇಕಾದರೆ ನಮ್ಮನೆಯಿಂದ ನಿಮಗೆ ಕೊಡ್ತೀನಿ, ಆದರೆ ಅದನ್ನು ಜರ್ಮನಿಗೆ ಹಿಂತಿರುಗಿದ ಮೇಲೆ ತಿನ್ತೀನಿ ಅಂತ ನೀವು ಭಾಷೆ ಹಾಕಬೇಕು, ಭಾರತದಲ್ಲಿರೋ ತನಕ ತಿನ್ನುಲ್ಲ ಅಂತ ಪ್ರಮಾಣ ಮಾಡಬೇಕು." ಎಂದು ಹೇಳಿದೆ. ಅದೇ ರೀತಿ ಮಾಡಿದ.

*   *   *   *

ಭಾವ ವೈದ್ಯದ ಕಾಗದ ಬರೆದ. ನನ್ನ ಸ್ನೇಹಿತ ಈಗ ಮಿಡಿಗಾಯನ್ನು ಸುಖವಾಗಿ ತಿನ್ತಾ ಇದಾನೆ. ನಾನೊಂದು ಚೂರು ತಿಂದೆ. ಅಭ್ಯಾಸ ತಪ್ಪಿಹೋಗಿತ್ತು. ಸ್ವಲ್ಪ ಹೊತ್ತು ಮೂರ್ಛೆ ಬಿದ್ದಿದ್ದೆ. ಈಗ ಸ್ವಸ್ಥವಾಗಿದ್ದೇನೆ. ಇನ್ನೊಂದೆರಡು ತಿಂಗಳಲ್ಲಿ ನನ್ನ ಓದು ಮುಗಿಯುತ್ತೆ. ಹಿಂತಿರುಗಿ ಬಂದು ಸ್ವದೇಶದಲ್ಲಿ ಸುಖವಾಗಿರ್ತೀನಿ ಅಂತ.

" ಬಾ. ಬಾ! ಸ್ವದೇಶದಲ್ಲಿ ಸುಖವಾಗಿರೋದನ್ನ ನೋಡಿಕೋತೀವಿ. ಬಾ. ಒಂಟಿಯಾಗಿ ಬಾ. ಗಂಟು ಹಾಕಿ ನಡೆದರೆ ಕಾಲು ತೊಡರೋ ಹಾಗೆ ಮಾಡ್ತೀನಿ" ಅಂತ ಮನಸ್ಸಿನಲ್ಲಿಯೇ ಶಪಥ ಮಾಡಿದೆ.

—ಕುಮಾರ್



ಈ ಊರಲ್ಲಿ ನಿಧನರಾದವರ ಪಟ್ಟಿ ದೊಡ್ಡದಾಗಿರುವುದಕ್ಕೆ ವಿಷಾದಿಸುತ್ತೇವೆ.

ನಮ್ಮ ಯಜಮಾನ್ರು ಬಹಳ ಜಾಣ್ರು

" ಹೊಸ ವರ್ಷದ ಹಬ್ಬ ನಾಳೆ ।
ಊರಿಗೆಲ್ಲಾ ಉಗಾದಿ ॥
ಖರ್ಚಿಗೆ ರೂಪಾಯ್ ಕೊಡಿ ಅಂದ್ರೆ ।
ಬಾಯನೆಲ್ಲಾ ಸ್ವೀ ಮಾಡ್ತೀನಿ ॥ "

ಅಂತ ನಗ್ತಾ ನಗ್ತಾ ಕೇಳಿದರೆ ।
ಸೊಂಟ ಬಳುಕಿಸಿ ಬೇಡಿದರೆ ॥

" ನಿನ್ನಯ ಮುಖವೇ ಕಣ್ಣಿಗೆ ಹಬ್ಬ ।
ಹಗಲೂ ಇರಳೂ ಉಗಾದಿ ॥
ಸಿಹಿಬಾಯ್ ಹಬ್ಬವ ಮಾಡುವ ರೀತಿ ।
ಬೇರೆ ಕಣೆ " ಅಂತಾರೆ ॥ ೧ ॥

" ದೀಪಾವಳಿ ಮುಂದಿನ ವಾರ ।
ಉಡಿಗೆ ತೊಡಿಗೆ ತರೋಣ ॥
ನೆರೆಹೊರೆಯವರ ಜತೆಗೂ ನಾವು ।
ಉಟ್ಟು ಉಂಡು ಮೆರೆಯೋಣ ॥ "

ಎಂದು ನಾನು ಕೇಳಿದರೆ ।
ಹುಸಿ ಕೋಪವನೂ ತೋರಿದರೆ ॥

" ಕೋಪಿಸಿಕೊಂಡರೆ ನೀ ಚೆನ್ನು ।
ಕಿಡಿ ಕಾರುತ್ತಿವೆ, ಕಣ್ಣು ॥
ದಿನವೂ ಬರುವೀ ದೀಪಾವಳಿಗೆ ।
ಉಡಿಗೆ ಏಕೆ ? " ಅಂತಾರೆ ॥ ೨ ॥

ಹುಟ್ಟಿದ ಹಬ್ಬ ಇವತ್ತು ಎಂದು ।
ಬೆಳಗಿನ ಝಾಮು ಎರಕೊಂಡು ॥
ಬಿಸಿ ಬಿಸಿ ಕಾಫಿ ತಿಂಡಿಯ ಕೊಟ್ಟು ।
"ಜ್ಞಾಪಕವಿದೆಯೇ ?" ಅಂತಂದ್ರೆ ॥

"ತಾಳಿ ಕಟ್ಟಿದ ದಿನವೂ ಹೀಗೇ ।
ನಿನ್ನನು ನಾನು ಕಂಡಿದ್ದೆ ॥
ನೆಂನೆಂಮುಖವು ಈಗಿರಲೂನೂ ।
ಚೆಲುವೆಯೇ ನೀನೂ ನನ್ನೆದುರು ॥"

ಹುಟ್ಟಿದ ಹಬ್ಬವ ಮರೆತೇಬಿಟ್ಟು ।
ವಯಸನು ಮಾತ್ರ ನೆನಪಿನಲ್ಲಿಟ್ಟು ॥
ಚೆಲು ಚೆಲ್ಲಾಗೆ ಆಡುವರಿವರು ।
ಹುಡು ಹುಡುಗಾಟಕ್ಕೆ ಮುಪ್ಪಿಲ್ಲ ॥ ೩ ॥

ನಮ್ಮ ಯಜಮಾನ್ರು ।
ಬಹಳ ಜಾಣ್ರು ॥



ಅತಿ—ಹೌದು ನಿಮ್ಮ ಹೆಂಡತೀನ್ನೇ ಉದಾಹರಿಸಿ ಹೀಗೆ ಹಾಸ್ಯ ಲೇಖನಗಳನ್ನು ಬರೀತೀರಲ್ಲ ಆಕೆ ಏನೂ ಅನ್ನೋಲ್ವೇ?

ಲೇಖಕ—ಹ್ಹ.. ಹ... ಆಕೆ ತಮಿಳಿನವಳು. ಕನ್ನಡ ಓದೋಕ್ಕೆ ಬರೋಲ್ಲ ಅವಳಿಗೆ!

ಪುಕಟ್ಟೆ ವೈದ್ಯ ಸಲಹೆ

[ಪತ್ರಿಕೆಯನ್ನೋದಿ ಬೇನೆ ಬಿದ್ದವರು, ನಮ್ಮ ವೈದ್ಯ ಸಲಹೆಗಾರರಿಗೆ ಪತ್ರ ಬರೆದರೆ ಪುಕಟ್ಟೆ ಸಲಹೆಯನ್ನು ಈ ಭಾಗದಲ್ಲಿ ಅವರು ನೀಡುತ್ತಾರೆ ಎಂದು ತಿಳಿಸಲು ನಮಗೆ ಸಮಾಧಾನವಾಗುತ್ತದೆ. —ಸಂ.]

ಪತ್ರ ೧೪.—ದೊಡ್ಡ ಮಂಗಳವಾಡಿ, ಸ್ತ್ರೀಪತಿರಾಯರು.

ಉತ್ತರ—ರಾಯರೇ! ನಿಮ್ಮ ದೀರ್ಘ ಪತ್ರ ಓದಿ ರೋಗದ ಪತ್ತೆ ಹಚ್ಚಿದೆ. ಯಾರು ಮೊದಲು ಪತ್ರಿಕೆಯನ್ನು ಓದಬೇಕೂ ಅಂತ ಪ್ರಾರಂಭವಾದ ಗಂಡಹೆಂಡಿರ ವಿರಸವು ಭಾವಮೈದುನ ಮನೆಗೆ ಬಂದಾಗ ಮುಕ್ತಾಯವಾಯಿತು ಅಂತ ಹೇಳಿದ್ದೀರಿ. ಅನಂತರ ನಿಮಗೆ ಕತ್ತುನೋವು, ಭುಜ ಕುಣಿತ, ಕಣ್ಣು ಕಿಡಿಹಾರಿದ ಹಾಗೆ ಆಗೋದು ಇವೆಲ್ಲಾ ಶುರುವಾಗಿದೆ. ಹತ್ತಾರು ಆಸ್ಪತ್ರೆಗಳಾಯ್ತು. ಗುಣವಿಲ್ಲ ಅಂತ ಬರೆದಿದ್ದೀರಿ.

ನಿಮ್ಮ ಕತ್ತಿನ ಮೇಲೆ ಕೂತು ನೋವು ಉಂಟುಮಾಡ್ತಾ ಇರೋದು, ವಾಯು ನೋವಲ್ಲ, ವಾಯುಪುತ್ರ ಹನುಮಂತರಾಯ, ಅಂದರೆ ನಿಮ್ಮ ಭಾವಮೈದುನನ ಮಂಗನಾಟವೆಲ್ಲಾ ನಿಮ್ಮ ಕುತ್ತಿಗೆಗೆ ಭಾರವಾಗಿದೆ. ಇದು ಔಷಧಿ, ಮದ್ದು, ಇಂಜಕ್ಷನ್‌ಗಳಿಂದಲೇ ಗುಣವಾಗಬೇಕು. ಆದರೆ ಅವನ್ನು ನೀವು ತೆಗೆದುಕೊಳ್ಳಬಾರದು. ನಿಮ್ಮ ಭಾವಮೈದುನನಿಗೆ ಕೊಡಿಸಿ. ಅವನ ಹೊಟ್ಟೆಗೆ ಮದ್ದು ಹಾಕಿಸಿ. ಹಸಿವು ಇಂಗೋ ಹಾಗೆಮಾಡಿ. ಯಾವುದಾದರೂ ಕಂತ್ರಿ ನಾಯನ್ನು ಹಿಡಿದು, ಅದರ ಕೈಲಿ ಅವನಿಗೆ ಮುತ್ತುಕೊಡಿಸಿ. ಆ ಮೇಲೆ ಹುಚ್ಚುನಾಯೇನೋ ಅದು ಅಂತ ಬೊಬ್ಬೆಹಾಕಿ, ಅವನ ಹೊಟ್ಟೆಮೇಲೆ ಹದಿನಾಲ್ಕು ದಿವಸ ಬಿಡದೆ, ದಬ್ಬಳ ಚುಚ್ಚಿಸಿ. ಹೀಗೆ ಎರಡು ಮೂರು ವಾರ ಮಾಡಿದರೆ, ಅವ ಅಕ್ಕನನ್ನು ಕರೆದು ಕೊಂಡು ಅವರ ಅಪ್ಪನ ಮನೆಗೆ ತಲೆತಪ್ಪಿಸಿಕೊಂಡು ಓಡಿಹೋಗುವುದು ಖಂಡಿತ. ಆ ಮೇಲೆ ಸುಖವಾಗಿ ಮನೆಯಲ್ಲಿ ನೀವು ಇರಬಹುದು. ಹೆಸರಿಗೆ ತಕ್ಕಂತೆ ನಿಜವಾಗಿ ಸ್ತ್ರೀಪತಿ ರಾಯರಾಗಬಹುದು. ಸಿಕ್ಕಿದ ಅಥವಾ ದಕ್ಕಿದ ಸ್ತ್ರೀಯೊಡನೆ. ಮುಂದೆ ಬರೋ ಬೇನೆಗಳಿಗೂ ಸಲಹೆ ಕೇಳಿ.

ಪತ್ರ ೨೨.—ಕಾಚಿಗುಡ, ಬಲಭೀಮಾಚಾರ್.

ಉತ್ತರ—ಆಚಾರ್ರೇ! ನಿಮ್ಮ ಕಾಗದದಿಂದ ನಿಮ್ಮ ತಾಪತ್ರಯದ ಅರಿವು ಉಂಟಾಯಿತು. ಗಂಧ ಅಥವಾ ಅಳಲೆಕಾಯಿ ತೇಯಿದು ಪಟ್ಟುಹಾಕಿದರೆ ಪ್ರಯೋಜನವಿಲ್ಲ. ಇನ್ನೂ ಹೆಚ್ಚು ಬಿರಿಯುತ್ತೆ. ಮುಲಾಮನ್ನು ಖಂಡಿತವಾಗಿಯೂ ಹಚ್ಚಬೇಡಿ. ಸುಮ್ಮಗೆ ಗಾಳೀಗೆ ಬಿಟ್ಟು ಒಣಗಿಸಿ. ಕೌಪೀನ ಕಚ್ಚೆ ಪಂಚೆ ವರ್ಜ್ಯ—ಬೈಸಿಕಲ್ ಮಾರಿಬಿಡಿ. ಬಸ್ ಪ್ರಯಾಣಕ್ಕೆ ಶುರುಮಾಡಿ.

೨೮.—ಕುಮಾರಿ ಲತಾ, ಕೆಂದೋಟದ ರಸ್ತೆ.

ಉತ್ತರ—ಸಾಧ್ಯವಿಲ್ಲ ತಾಯಿ. ಖಂಡಿತವಾಗಿಯೂ ಸಾಧ್ಯವಿಲ್ಲ. ನೀವು ಶೀರ್ಷಾಸನ ಹಾಕಿ ದಿನಾಲೂ ಒಂದು ಗಂಟೆ ನಿಂತರೂ ಸಾಧ್ಯವಿಲ್ಲ. ಗಾಂಧಾರಿ ತೈಲವನ್ನು ಚೆನ್ನಾಗಿ ತಿಕ್ಕಿಸಿಕೊಂಡು ದಿನಾಗಲೂ ಎಣ್ಣೆ ನೀರು ಹಾಕಿಕೊಂಡರೂ—ಸಾಧ್ಯವಿಲ್ಲ. ಅರಬ್ ದೇಶಗಳಿಗೆ ಹೋಗಿ, ಯೌವನಸ್ಥ ಷೇಕ್‌ನ ಅಂತಃಪುರವನ್ನು ಸೇರಿಕೊಂಡರೂ ಸಾಧ್ಯವಿಲ್ಲ.

ನಲವತ್ತು ವರ್ಷಗಳ ಹಿಂದೆ ನೀವು ಮಾಡಬೇಕಾದ್ದನ್ನು ಈಗ ಮಾಡ್ತೀನಿ, ಫಲ ಸಿಗುತ್ತ್ಯೆ ಎಂದು ಕೇಳಿದ್ದೀರಿ; ಸಾಧ್ಯವಿಲ್ಲ. ಎಂದಿನಂತೆ ಬೆಕ್ಕಿನ ಮರಿಗಳನ್ನು ಸಾಕಿ, ಸಲಹಿ, ಅವುಗಳಿಗೆ ತಾಯಿಯಾಗಿರಿ. ಬೇರೆ ತರಹ ತಾಯಿಯಾಗಲು ನಿಮ್ಮ ಈಗಿನ ೩೦೦ ಪೌಂಡು ತೂಕದಲ್ಲಿ, ಸಾಧ್ಯವಿಲ್ಲ.

ಸಾಕಿದ ಬೆಕ್ಕಿನ ಮರಿಗಳ ಫೋಟೋ ಪ್ರತಿಯನ್ನು ಕರುಣಿಸಿ ಕಳಿಸಿ.

ಪತ್ರ ೮೨.—ಜೆ. ಕೆ. ರಾ. ಮಗಳವಾಡಿ.

ಉತ್ತರ—ತಲೆ ಆಗಾಗ ತಿರುಗುತ್ತೆ. ಕಣ್ಣು ಪಿಳ ಪಿಳ ಅನ್ನಿಸುತ್ತೆ. ಹಸಿವು ಸರಿಯಾಗಿ ಆಗುವುದಿಲ್ಲ. ಕಾಲೇಜಿನಲ್ಲಿ ಹೇಳಿಕೊಟ್ಟ ಪಾಠ ಮೆದುಳನ್ನು ಮುಟ್ಟುವುದೇ ಇಲ್ಲ ಅಂತ ಬರೆದಿದ್ದೀ ಮಗು.

ಆ ವಯಸ್ಸಿನಲ್ಲಿ ಇದೆಲ್ಲಾ ಸ್ವಾಭಾವಿಕ. ನೀನು ಕೊಟ್ಟ ವಿವರಣೆಗಳಿಂದ ನೀನು ಬಾಡಿಗೆಗಿರುವ ಮಹಡಿ ಕೊಠಡಿಯ ಪಶ್ಚಿಮ ಕಿಟಕಿಗೆ, ತರುಣೀ ಸಂಘದ ಹಾಸ್ಟೆಲು ನೇರ ಕಾಣಿಸುತ್ತಿರಬೇಕು ಆ ಕೊಠಡಿಯನ್ನು ಬಿಟ್ಟು, ಬೇರೆ ಬಡಾವಣೆಗೆ ಹೋಗಿ, ಬಾಡಿಗೆ ರೂಂ ತೆಗೆದುಕೊ. ಎಲ್ಲಾ ಸರಿಹೋಗುತ್ತೆ. ಬಾದಾಮಿ ಹಾಲು ಕುಡೀಬೇಡ. ಮೂರು ನಾಲ್ಕು ವರ್ಷದಲ್ಲಿ ನಿನ್ನ ಲಗ್ನಪತ್ರಿಕೆ ಕಳಿಸು.

ಪತ್ರ ೯೧.—ಕಾರಕೂನ ಕುಲಕರ್ಣಿ, ರಾಜಾಜಿಪುರ, ಹೆಬ್ಬಿಗುಬ್ಬಾಲೆ.

ಉತ್ತರ—ಬಲಗಾಲು ಸೇದು ಬಂದು ಬಡಕೊಳ್ಳೋ ಹಾಗೆ ಆಗುವುದೂ, ನಿಮ್ಮ ಆಫೀಸಿನ ಪತ್ರಗಳನ್ನು ಆಡಿಟ್ ಮಾಡುವುದಕ್ಕೆ ಬರುವುದೂ, ಒಂದೇ ಕಾಲದಲ್ಲಿ ಆಗುತ್ತದೆ ಎಂದು ಬರೆದಿದ್ದೀರಿ. ಇದು ಸ್ವಾಭಾವಿಕ. ಚಿಕಿತ್ಸೆ ಸುಲಭ. ಒಂದು ದೊಡ್ಡ ಫುಟ್‌ಬಾಲ್ ತರಿಸಿ. ಅದರ ಮೇಲೆ ಆಡಿಟ್ ಮಾಡುವುದಕ್ಕೆ ಬರುತ್ತಾನಲ್ಲ ಅವನ ಚಿತ್ರಾನ ಬರೆಸಿ. ನಂತರ ನಾಲ್ಕು ಜನ ಧಾಂಡಿಗರೊಡನೆ ಸೇರಿಕೊಂಡು ಆ ಚೆಂಡನ್ನು ಬಲಗಾಲಿನಿಂದ ಆ ಕಡೆಗೆ ಈ ಕಡೆಗೆ ಎಕ್ಕಿ. ಒಂದು ವಾರ ಮಾಡಿ, ಚೆಂಡು ಹರಿಯೋತನಕ ಮಾಡಿ. ಕಾಲು ಸೇದು ಕಡಿಮೆಯಾಗುತ್ತೆ.

—ಪ್ರಸಾದ್.

ದುಡಿದವರಿಗೆ ದುಡ್ಡು

ರಾಜೀವಪುರದಲ್ಲಿ ಅಜ್ಜಂದಿರೆಲ್ಲಾ ಮೊಮ್ಮಕ್ಕಳಿಗೆ ನೀತಿಯ ಪಾಠ ಹೇಳಿಕೊಡುವಾಗ ಅಣ್ಣಯ್ಯ ತಮ್ಮಯ್ಯನ ಕತೇನ ಹೇಳ್ತಾರೆ. ಕತೆ ಮುಗಿಸಿ ಅದಕ್ಕೇ ಮರಿ! ದುಡಿಯೋದಕ್ಕೆ ಬೆದರಬಾರದು. ಕಷ್ಟಪಟ್ಟು ದುಡಿದರೆ ಎಂದಾದರೂ ದುಡ್ಡು ಸಿಕ್ಕೇ ಸಿಗುತ್ತೆ ಅಂತ ಹೇಳ್ತಾರೆ.

ಆಂಜನೇಯನ ಗುಡಿ ಬೀದೀಲಿ ಅಣ್ಣಯ್ಯ ತಮ್ಮಯ್ಯ ಅಂತ ಇಬ್ಬರು ಅಣ್ಣತಮ್ಮಂದಿರಿದ್ದರು. ತಂದೆ ತಾಯಿ ಪ್ಲೇಗು ತಗುಲಿ ಸತ್ತುಹೋದಾಗ, ಅಣ್ಣಯ್ಯನಿಗೆ ಎಂಟು ವರ್ಷ, ತಮ್ಮಯ್ಯನಿಗೆ ಆರು ವರ್ಷ. "ತಮ್ಮಾ! ನೀನು ಹೆದರಬೇಡ, ಹೇಗಾದರೂ ದುಡಿದು ಇಬ್ಬರಿಗೆ ಸಾಕಾಗೋ ಅಷ್ಟು ಊಟ ಸಂಪಾದಿಸ್ತೀನಿ" ಅಂತ ಅಣ್ಣಯ್ಯ ಧೈರ್ಯ ಕೊಟ್ಟ. ಮಾರನೆ ದಿನದಿಂದಲೇ ಬಸ್ ನಿಲ್ದಾಣಕ್ಕೆ ಹೋಗಿ ಚಡಾವು ಬೂಡ್ಸುಗಳಿಗೆ ಬಣ್ಣಕಟ್ಟುವ ಕಟ್ಟೆಯಲ್ಲಿ ಕುಳಿತ. ಎಳೆ ಹುಡುಗನ ಮುಖ ನೋಡಿ ಕೆಲವರು, ಎಷ್ಟು ಕೊಟ್ಟರೂ ಇಸುಕೋತಾನೆ ಅಂತ ಕೆಲವರು, ಬಸ್ ಬರುವುದು ಹೊತ್ತಾಗುತ್ತೆ, ಆ ತನಕ ಬೂಡ್ಸನ್ನಾದರೂ ಪಾಲೀಷ್ ಮಾಡಿಸೋಣ ಅಂತ ಇನ್ನಿತರರು, ಅಣ್ಣಯ್ಯನ ಬಳಿಗೆ ಬಂದು ಉತ್ತೇಜನ ಕೊಡುತ್ತಿದ್ದರು. ಹೀಗಾಗಿ ಸಂಜೆ ಹೊತ್ತಿಗೆ ಹತ್ತು ಹನ್ನೆರಡು ನಯೆಪೈಸೆ ಸಂಪಾದಿಸಿ, ಆ ದುಡ್ಡಿನಲ್ಲಿ ಕಡಲೆಪುರಿ, ಬೆಲ್ಲ ಕೊಂಡು ಕೊಂಡು ಮನೆಗೆ ಹೋಗಿ, ತಮ್ಮಯ್ಯ ಕೇಳಿದಷ್ಟನ್ನು ಕೊಟ್ಟು, ಮಿಕ್ಕಿದ್ದನ್ನು ತಾನು ತಿಂದು ಭಾವೀ ನೀರು ಕುಡಿದು ತೇಗಿ ಮಲಗುತ್ತಿದ್ದ.

ಐದಾರು ತಿಂಗಳಿನಲ್ಲಿ ಬೂಟ್ ಪಾಲೀಷ್ ಕೊಂಡು, ಷಾಮೋಯ್ ಚರ್ಮದಿಂದ ತಿಕ್ಕಿ, ತನ್ನ ವ್ಯಾಪಾರವನ್ನು ಕುದುರಿಸಿಕೊಂಡ. ಗಿರಾಕಿಗಳು ಕಾಲಿರಿಸಿ ನಿಂತುಕೊಳ್ಳಲು ಕರಿ ಮರದ ಮೂರ್ಕಾಲು ಇಳಿಜಾರು ಮಣೇನ ಮಾಡಿಸಿದ.

ಐದಾರು ವರ್ಷ ಆಗುವುದರೊಳಗೆ ಹಸಿರು ಸಮವಸ್ತ್ರ ಧರಿಸಿ, ಕೆಂಪು ಟೋಪಿ ಹಾಕಿಕೊಂಡು, ಚಡಾವು ಬೂಡ್ಸುಗಳಿಗೆ ರಂಗು ಮೆರಗಲು ಸಿದ್ಧನಾಗುವಂತಾದ. ಕಿರುಮೀಸೆ ಬಂದು ಹದಿನೆಂಟರ ಪ್ರಾಯದ ಆಸಾಮಿ ಆಗೋ ಹೊತ್ತಿಗೆ ಅಣ್ಣಯ್ಯ ದಿನಕ್ಕೆ ಏನಿಲ್ಲ ಅಂದರೂ ಒಂದು ರೂಪಾಯಿ ಸಂಪಾದಿಸ್ತಾ ಇದ್ದ. ಮಳೆಗಿಳೆ ಬಂದ ದಿನ ಅದರ ಮಾರನೆ ದಿನ ಎರಡು ಮೂರು ರೂಪಾಯಿ ಕೂಡ ಸಂಪಾದಿಸ್ತಾ ಇದ್ದ.

ಚಿಲ್ಲರೆ ದುಡ್ಡನ್ನು ಪೈಜಾಮಾ ಜೇಬಿನಲ್ಲಿ ತುಂಬಿಕೊಂಡು ಸಂಜೆ ಹಿಂತಿರುಗು ವಾಗ ಚೆಂದುಳ್ಳಿ ಹುಡುಗಿಯರನ್ನು ಕಂಡರೆ, ಜೇಬಿನಲ್ಲಿ ಝಣ ಝಣ ಶಬ್ದ ಮಾಡು ವಷ್ಟು ಚೂಟಿಯಾದ, ಅಣ್ಣಯ್ಯ.

ತಮ್ಮಯ್ಯನಿಗೆ ಯಾವ ಕಷ್ಟವೂ ಇರಲಿಲ್ಲ. ಕಾರ್ಪಣ್ಯವೇನೂ ಇರಲಿಲ್ಲ. ಕೆಲಸ ಅಂದರೆ ಬೇಜಾರು ಅವನಿಗೆ. ಓದು ಬರೆಹ ಕಲಿಯಲೇ ಇಲ್ಲ. ಅಣ್ಣಯ್ಯ ತಂದ ತಿಂಡಿ ತಿಂದು ಮಾರೀಗೆ ಬಿಟ್ಟ ಬೀದಿ ಬಸವನ ಹಾಗೆ ಅಲೆದಾಡುತ್ತಾ ಕಾಲ ಕಳಿಯುತ್ತಿದ್ದ. ಆದರೆ ಒಂದು ಗುಣ ಇತ್ತು ಅವನಿಗೆ. ಅವನ ದನಿ ಸಾಮಾನ್ಯ ವಾಗಿ ಮಾತನಾಡಿದರೆ ಮೂರು ಮನೆ ಆಚೆ ಕೇಳಿಸುತ್ತಿತ್ತು. ಸ್ವಲ್ಪ ದನಿ ಎತ್ತಿ ಕೂಗಿದರೆ, ಜಟ್ಕಾಗಳು, ಆಟೋರಿಕ್ಷಾಗಳು ಗಲಾಟೆ ಮಾಡ್ತಾ ಇದ್ದರೂ, ಸುಮಾರು ಎರಡು ಗಾವುದ ದೂರ ಕೇಳಿಸುತ್ತಾ ಇತ್ತು. ಈ ಹಿರಿಯ ಗುಣವನ್ನು ಕಂಡ ಊರು ಪುಢಾರಿಗಳು ಇವನನ್ನು ರಾಜಕೀಯಕ್ಕೆ ಸೇರಿಸಿಕೊಂಡರು. ಎಂತಹ ಮಳೆ ಬೀಳ್ತಾ ಇರಲಿ ಇವನು ಭಾಷಣ ಮಾಡುಕ್ಕೆ ಶುರುಮಾಡಿದರೆ, ಎಲ್ಲರಿಗೂ ಕೇಳಿಸುತ್ತಿತ್ತು

ತಮ್ಮಯ್ಯ ಗೂಳಿ ಬೆಳೆದ ಹಾಗೆ ಬೆಳೆದಿದ್ದ. ಹದಿನಾರರ ಪ್ರಾಯದಲ್ಲೇ ಗಿರಿಮೀಸೆ ಬೆಳೆದಿತ್ತು. ಅಣ್ಣಯ್ಯನಿಗೆ ಕಿರುಮೀಸೆ ಕಾಣಿಸಿಕೊಳ್ಳುವ ಹೊತ್ತಿಗೆ ತಮ್ಮಯ್ಯ ಮೀಸೇನ ಕಸಿಮಾಡ್ತಾ ಇದ್ದ. "ಬಡವರ ಬಂದೀಖಾನೆ ನಮ್ಮ ದೇಶ" —"ಮೂರನೇ ಪ್ಲಾನ್ ಫಲ ಕೊಟ್ಟರೆ, ನಮ್ಮ ದೇಶದಲ್ಲಿ ಹುಟ್ಟಿದ ಎಲ್ಲಾ ಮಕ್ಕ ಳಿಗೂ ಚಿನ್ನದ ಒಳಲೇಲಿ ಹಾಲು ಕುಡಿಸುತ್ತೇನೆ" "ನಮ್ಮ ಪಾರ್ಟಿಗೆ ಬೆಂಬಲ ಕೊಡಿ, ನಿಮ್ಮ ಮನೆ ಹಿತ್ತಿಲಿನಲ್ಲಿ ಎಂಟೆಮ್ಮೆ ತಲಾ ಎಂಟೆಂಟು ಸೇರು ಕರೆಯೋ ಹಾಗೆ ಮಾಡ್ತೇನೆ" — ಇತ್ಯಾದಿ ಇತ್ಯಾದಿ ಘೋಷಣೆಗಳನ್ನು ಕಣ್ಣುರೆಪ್ಪೆ ಹಾರಿಸದೆ, ಸ್ವಲ್ಪವೂ ತಡವರಿಸದೆ, ಸಾಪ್‌ಸೀದ ಮಾಡಲು ಸುಲಭವಾಗಿ ಕಲಿತ

ಸೇಂದಿ ಕಂಟ್ರಾಕ್ಟರ್ ಶೀನಪ್ಪನ ಮೊದಲ ಹೆಂಡತಿಗೆ ಒಂದು ಹೆಣ್ಣು ಹುಟ್ಟಿತ್ತು. ಸವತಿಯ ಕಾಟ ತಡೆಯಲಾರದೆ ಅಮ್ಮ ಸತ್ತಾಗ ಹೆಣ್ಣು ಮಗುವಿಗೆ ಹನ್ನೆರಡು ವರ್ಷ ಆಗಿತ್ತು. ಶೀನಪ್ಪನ ಮೊದಲ ಹೆಂಡತಿ ಅನುಕೂಲವಾಗಿ ಸತ್ತಾಗಿ ನಿಂದ ಆ ಹೆಣ್ಣುಮಗಳನ್ನು ಯಾರಿಗಾದರೂ ಗಂಟುಹಾಕಿಬಿಟ್ಟು ಸಾಗಿಸಿದರೆ ಆಮೇಲೆ ತಾನು ಬೇಕಾದ ಹಾಗೆ ಇರಬಹುದು ಅಂತ ಆಸೆ. ಅದಕ್ಕೇ ಬಹಳ ತಲಾಷ್ ಮಾಡ್ತಾ ಇದ್ದ. ಆದರೆ, ಆ ಹುಡುಗೀನ ನೋಡಿದವರು ಬೆಚ್ಚಿಬಿದ್ದು ಹಿಂತಿರುಗುತ್ತಿದ್ದರೇ ವಿನಹಾ, ಧೈರ್ಯಮಾಡಿ ತಾಳಿ ಕಟ್ಟೇನಿ ಅನ್ನೋರು ಯಾರೂ ಸಿಕ್ಕಿರಲಿಲ್ಲ.

ಸೇಂದಿ ಸೀನಪ್ಪ ಕಂಠಪೂರ್ತಿ ಕುಡಿದುಬಿಟ್ಟು ಒಂದು ರಾತ್ರಿ ಎಂಟು ಒಂಭತ್ತರ ಹೊತ್ತಿಗೆ ಹಿಂತಿರುಗುತ್ತಿದ್ದಾಗ, ಮೂರು ರಸ್ತೆ ಸೇರಿರುವ ಚೌಕದಲ್ಲಿ

ತಮ್ಮಯ್ಯ ಭಾಷಣ ಬಿಗಿಯುತ್ತಿದ್ದ. ಅಮಲಿನಲ್ಲಿದ್ದ ಶೀನಪ್ಪನಿಗೆ ಈ ಭಾಷಣ ಬಹಳ ಆಪ್ಯಾಯಮಾನವಾಗಿ ಕೇಳಿಸಿತು. ವಹವ್ವಾ ಅಂತ ಕೇಳುತ್ತಾ ನಿಂತ. ಅರ್ಧ ಗಂಟೆಗೆ ಭಾಷಣ ಮುಗೀತು. ಶೀನಪ್ಪ ಊಗಾಡುತ್ತ ಹೋಗಿ "ಯಾರ್ಲಾ ನಮ್ಮ ತಮ್ಮಯ್ಯಾನಾ! ಏನು ಪಸಂದಾಗಿ ಮಾತಾಡ್ತೀಲಾ, ಬಲು ಖುಸಿ ಆಯ್ತು ನಂಗೆ. ಬಾ ನನ್ಜೊತೆ ನಮ್ಮನ್ಯಾಗಾ ಕೂಳು ಉಣ್ಣೋವಂತಿ" ಅಂತ ಆಹ್ವಾನ ಕೊಟ್ಟು ಸೆಳೆದುಕೊಂಡೇ ಹೋದ.

ಶೀನಪ್ಪ ತಮ್ಮಯ್ಯ ಊಟಕ್ಕೆ ಕೂತರು. ಬೆಳೆದ ಮಗಳೇ ಬಡಿಸಿದಳು. ಬಡಿಸಿದ ಊಟಕ್ಕಿಂತ ಬಡಿಸೋ ಹೆಣ್ಣನ್ನು ದೃಷ್ಟಿಸಿ ತಮ್ಮಯ್ಯ ನೋಡಿದ. ಇದನ್ನು ಶೀನಪ್ಪ ನೋಡಿದ.

ಒಂದು ವಾರದಲ್ಲಿ ತಮ್ಮಯ್ಯ, ಶೀನಪ್ಪನ ಮಗಳನ್ನ ಮದುವೆಯಾದ. ಆಗಾದ ಒಂದು ವಾರದಲ್ಲಿ ಶೀನಪ್ಪ ಒಂದು ರಾತ್ರಿ ಕುಡಿದು ಕುಡಿದು ಮಲಗಿದೋನು ಬೆಳಗ್ಗೆ ಏಳಲೇ ಇಲ್ಲ. ಸತ್ತವನಿಗೆ ಇದ್ದೊಬ್ಬ ಮಗಳೇ ವಾರಸುದಾರಿಣಿ.

ತಮ್ಮಯ್ಯ ಹಠಾತ್ತನೆ ಲಕ್ಷಾಧಿಕಾರಿಯಾದ.

ಆದರೆ ತಮ್ಮಯ್ಯ, ಅಷ್ಟು ದಿವಸ ಅವನನ್ನು ಸಾಕಿ ಸಲಹಿದ ಅಣ್ಣನನ್ನು ಮರೆತಾ ಅಂತೀರಾ?

ಇಲ್ಲ. ಖಂಡಿತವಾಗಿ ಇಲ್ಲ.

ಶೀನಪ್ಪ ಸತ್ತ ಹತ್ತನೇ ದಿನ ಅಣ್ಣಯ್ಯನ ಬಳಿಗೆ ಹೋಗಿ, "ಅಣ್ಣಯ್ಯಾ! ಎಷ್ಟು ದುಡಿದರೂ ದಿನಕ್ಕೆ ೧-೨-೩ ರೂಪಾಯಿ ಸಿಕ್ಕಿದರೆ ಹೆಚ್ಚು ನಿನಗೆ. ನಾಳೆಯಿಂದ ನಮ್ಮ ಗಡಂಗಿನ ತಾವಕ್ಕೆ ಬಾ. ಗಡಂಗಿಗೆ ಬಂದು ಕುಡಿದೋರ ಚಪ್ಪಲೀಗೆ ಷೂಗೆ, ಬೂಟ್ಸಿಗೆ ಬಣ್ಣ ಹಾಕು. ಅವರ ಹತ್ತಿರ ನೀನೇನೂ ದುಡ್ಡು ಕೇಳಬೇಡ. ದಿನಾಗಲೂ ನಾನೇ ಐದು ರೂಪಾಯಿ ಕೊಡ್ತೀನಿ" ಅಂತ ಔದಾರ್ಯದಿಂದ ಹೇಳಿದ.

ದುಡಿದು ದುಡಿದು, ಒಂದು ಎರಡು ಮೂರು ರೂಪಾಯಿ ಸಂಪಾದನೆಯಲ್ಲಿದ್ದ ಅಣ್ಣಯ್ಯ, ಕಡೆಗೆ ಐದು ರೂಪಾಯಿ ಗಳಿಸಿದ.

ಅಂತ ಅಣ್ಣಯ್ಯ ತಮ್ಮಯ್ಯನ ಕತೆ ಹೇಳ್ತಾರೆ ಅಜ್ಜಂದಿರು.

—ಬಚ್ಚ.

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್

ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, December 1963

Reg. No. B.G. 343 KORAVANJI December 1963

Printed by B. S. Iyengar, Bangalore-2
Publisher—B. N. Gupta. Editor—M. Sivaram.